# ಅಧ್ಯಯನ – 7 Study VII

# ಪಾಪ ವಿಮೋಚನೆಯ ಮಹಾಯಾಜಕ (ಮಧ್ಯಸ್ತನು)

## "ಮನುಷ್ಯ ಕುಮಾರನು"

## The High Priest (Mediator) of the Atonement

## "The Son of Man"

**ಈ ಬಿರುದಿನ ಅರ್ಥ ಏನು ಅಲ್ಲ?– ಇದರ ಅರ್ಥವೇನು ? – ಇದರ ಗೌರವಗಳು ನಿರ್ವಿವಾದವುಗಳು, ಅವುಗಳನ್ನು ಬೇರೆ ಯಾರೂ ಹಕ್ಕಿನಿಂದ ಪಡೆಯಲಾರರು – ಲೋಕವು ಕಂಡಂತೆ ದೇವಕುಮಾರ – ಪಿಲಾತನ ದೃಷ್ಟಿಕೋನ, Rousseau ನ ದೃಷ್ಟಿಕೋನ, ನೆಪೋಲಿಯನ್ನನ ದೃಷ್ಟಿಕೋನ – "ಆತನಲ್ಲಿ ಯಾವ ಅಂದಚಂದಗಳೂ ಇರಲಿಲ್ಲ, ನಾವು ಅವನನ್ನು ನೋಡಿದಾಗ ನೋಡತಕ್ಕ ಯಾವ ಲಕ್ಷಣವೂ ಕಾಣಲಿಲ್ಲ" "ಅವನ ಮುಖವು . . . ವಿಕಾರವಾಗಿತ್ತು" " ಹತ್ತು ಸಾವಿರ ಜನರಲ್ಲಿ ಧ್ವಜಪ್ರಾಯನು" – "ಹೌದು, ಸರ್ವಾಂಗದಲ್ಲಿಯೂ ಮನೋಹರನು" ಮುಂತಾದ ಹೇಳಿಕೆಗಳ ಮಹತ್ವ.**

ನಮ್ಮ ಕರ್ತನಾದ ಯೇಸುವಿಗೆ ಅನ್ವಯಿಸಲಾಗಿರುವ ಅನೇಕ ಶಿರೋನಾಮೆಗಳಲ್ಲಿ, ಆಗಿಂದಾಗ್ಗ್ಯೆ ಆತನೇ ತನಗಾಗಿ ಹೆಚ್ಚಾಗಿ ಉಪಯೋಗಿಸಲ್ಪಡುತ್ತಿದ್ದ ಶಿರೋನಾಮೆಯೆಂದರೆ **"ಮನುಷ್ಯ ಕುಮಾರನು"** ಎಂಬುದು. ಕೆಲವರು ನಮ್ಮ ಕರ್ತನು ತಾನು ಯೋಸೇಫನ ಮಗನು ಎಂದು ತಿಳಿಸುವ ಸಲುವಾಗಿ ಇದನ್ನು ಉಪಯೋಗಿಸುತ್ತಿದ್ದನು ಎಂಬ ಆಲೋಚನೆಗೆ ವಾಲುತ್ತಾರೆ. ಆದರೆ, ಇದು ಸಂಪೂರ್ಣವಾಗಿ ತಪ್ಪು ; ಆತನು ಎಂದಿಗೂ ಯೋಸೇಫನನ್ನು ತನ್ನ ತಂದೆ ಎಂಬುದಾಗಿ ಅಂಗೀಕರಿಸಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಆತನು ತನಗಾಗಿ ಆಗಿಂದಾಗ್ಗೆ ಉಪಯೋಗಿಸುತ್ತಿದ್ದ ಈ ಶಿರೋನಾಮೆಯು ಕೇವಲ ಆತನ ಈ ಭೂಲೋಕದ ಜೀವಿತವನ್ನು ಗೌರವಿಸುವುದು ಮಾತ್ರವಲ್ಲ, ಅದು ಆತನ ಪ್ರಸ್ತುತ ಸ್ಥಿತಿಯನ್ನು ಮತ್ತು ಮಹಿಮೆಯನ್ನು ಗೌರವಿಸುವುದಾಗಿತ್ತು. ಇದರಿಂದ ಕೆಲವರು ಇತರ ಅತಿರೇಖಕ್ಕೆ ಜಿಗಿದು ಇದು ನಮ್ಮ ಕರ್ತನು ಈಗ ಪರಲೋಕದಲ್ಲಿಯೂ ಮಾನವನಾಗಿಯೇ ಇದ್ದಾನೆ – ತನ್ನ ಮಾನವ ಸ್ವಭಾವವನ್ನು ಕಾಪಾಡಿಕೊಂಡಿದ್ದಾನೆ ಎಂಬುದನ್ನು ಸೂಚಿಸುತ್ತದೆ ಎಂದು ಹೇಳುವವರಾಗಿದ್ದಾರೆ. ನಾವು ಈಗ ನಿಮಗೆ ತೋರಿಸಲು ಪ್ರಯಾಸ ಪಡುವಂತೆ ಇದು ಯಾವುದೇ ಪ್ರಮಾಣೀಕರಣವಿಲ್ಲದ್ದು ಮತ್ತು 'ಮನುಷ್ಯ ಕುಮಾರನು' ಎಂಬ ಆತನ ಶಿರೋನಾಮೆಯ ತಪ್ಪು ಗ್ರಹಿಕೆಯಾಗಿದೆ. ಆದರೆ, ಅದೇ ಸಮಯದಲ್ಲಿ ಅಂಥಾಃ ಆಲೋಚನೆಯು ದೇವರ ವಾಕ್ಯದ ಸಮಗ್ರ ಬೋಧನೆಗಳ ಅರ್ಥಕ್ಕೆ ವಿರುದ್ಧವಾಗಿದೆ ಎಂಬುದನ್ನು ನಾವು ಗಮನಿಸಬೇಕಾಗುತ್ತದೆ. ನಮ್ಮ ಕರ್ತನು ಮಾನವನಂತೆ ದೀನತೆಯಿಂದ ತನ್ನನ್ನು ತಗ್ಗಿಸಿಕೊಂಡದ್ದು ಶಾಶ್ವತವಾದುದಲ್ಲ, ಅದು ಕೇವಲ ಮಾನವರ ವಿಮೋಚನೆಯ, ಅವರ ದಂಡವನ್ನು ತೆರುವ ಮತ್ತು ಆ ಮೂಲಕ ಸಂಭವನೀಯವಾಗಿ ತನ್ನ ಪರಲೋಕದ ತಂದೆಗೆ ತನ್ನ ನಿಷ್ಠೆಯನ್ನು ರುಜುವಾತುಪಡಿಸುವ ಉದ್ದೇಶವಾಗಿತ್ತು ಎಂಬುದಕ್ಕೆ ದೇವರ ವಾಕ್ಯದ ಹೇಳಿಕೆಗಳು ಬಲು ಸ್ಪಷ್ಟವಾಗಿವೆ. ಇದರ ಸಲುವಾಗಿ ಆತನು ಕೂಡಲೇ ಲೋಕವುಂಟಾಗುವುದಕ್ಕೆ ಮುಂಚೆ ತನ್ನ ತಂದೆಯೊಂದಿಗೆ ಇದ್ದ ಮಹಿಮಾ ಸ್ಥಿತಿಗೆ, ಆದರೆ ಎಲ್ಲಾ ದೇವದೂತರಿಗಿಂತಲೂ, ಸಂಸ್ಥಾನಗಳಿಗಿಂತಲೂ ಎಲ್ಲಾ ಅಧಿಕಾರಗಳಿಗಿಂತಲೂ ಬಲು ಭವ್ಯವಾದ ಮಹಿಮೆಗೆ, ಅನುಗ್ರಹದ ಸ್ಥಾನಕ್ಕೆ ಉನ್ನತೋನ್ನತ ಸಾರ್ವಭೌಮನಾದ ಪರಲೋಕದ ತನ್ನ ತಂದೆಯ ಬಲಪಾರ್ಶ್ವಕ್ಕೆ ಏರಿಸಲ್ಪಟ್ಟನು.

ನಮ್ಮ ಕರ್ತನು ಈ ಶಿರೋನಾಮೆಯನ್ನು ಉಪಯೋಗಿಸಿದ ಕೆಳಗಣ ಮಾತುಗಳನ್ನು ಜಾಗರೂಕತೆ ಯಿಂದ ಗಮನಿಸಿರಿ :–

ಸುವಾರ್ತಾ ಯುಗದ ಸುಗ್ಗಿಕಾಲದಲ್ಲಿ **"ಮನುಷ್ಯ ಕುಮಾರನು ತನ್ನ ದೂತರನ್ನು ಕಳುಹಿಸುವನು"** – ಮತ್ತಾಯ 13:41.

**"ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣದವರೆಗೂ ಕಾಣುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ ಇರುವುದು"** – ಮತ್ತಾಯ 24:27.

**"ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ ಇರುವುದು"** – ಮತ್ತಾಯ 24:37.

**"ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡಿಬರುವಾಗ ತನ್ನ ಮಹಿಮೆಯ ಸಿಂಹಾಸನದಲ್ಲಿ ಕುಳಿತುಕೊಳ್ಳುವನು"** – ಮತ್ತಾಯ 25:31.

**"ಈ ಪಾಪಿಷ್ಟ ಸಂತತಿಯಲ್ಲಿ ಯಾವನು ನನಗೂ ನನ್ನ**

**ಮಾತುಗಳಿಗೂ ನಾಚಿಕೊಳ್ಳುತ್ತಾನೋ ಅವನಿಗೆ ಮನುಷ್ಯಕುಮಾರನು ತಾನು ತನ್ನ ತಂದೆಯ ಪ್ರಭಾವದೊಡನೆ ಪರಿಶುದ್ಧ ದೇವದೂತರ ಸಮೇತವಾಗಿ ಬರುವಾಗ ನಾಚಿಕೊಳ್ಳುವನು"** – ಮಾರ್ಕ : 8:38.

**"ಹಾಗಾದರೆ ಮನುಷ್ಯಕುಮಾರನು ತಾನು ಮೊದಲು ಇದ್ದಲ್ಲಿಗೆ ಏರಿಹೋಗುವುದನ್ನು ನೀವು ನೋಡಿದರೆ ಏನನ್ನುವಿರಿ?"** – ಯೋಹಾನ 6:62.

**"ಪರಲೋಕದಿಂದ ಇಳಿದುಬಂದವನೇ ಅಂದರೆ ಮನುಷ್ಯಕುಮಾರನೇ ಹೊರತು ಮತ್ತಾರೂ ಪರಲೋಕಕ್ಕೆ ಏರಿಹೋದವರಲ್ಲ"** – ಯೋಹಾನ 3:13.

ದೇವರವಾಕ್ಯದ ಈ ಮಾತುಗಳು 'ಮನುಷ್ಯ ಕುಮಾರ'ನನ್ನು ಮಹಿಮಾ ಕರ್ತನೊಂದಿಗೆ ಹಾಗೂ ಮಾಂಸಶರೀರಧಾರಿಯಾಗಿ ಪರಲೋಕದಿಂದ ಇಳಿದುಬಂದಾತನೊಂದಿಗೆ ಮತ್ತು ತನ್ನನ್ನೇ ಅರ್ಪಿಸಿದ ಮಾನವ ಪೂರ್ವ – ಲೋಗೋಸ್‌ನೊಂದಿಗೆ, ಗುರುತಿಸುತ್ತವೆ. ನಿಶ್ಚಯವಾಗಿಯೂ, 'ಮನುಷ್ಯಕುಮಾರನು' ಎಂಬ ನಾಮವು ಯೇಸುವು ಯೋಸೇಫನ ಮಗನು ಅಥವಾ ಸಾಮಾನ್ಯ ಅರ್ಥದಲ್ಲಿ ಆತನು ಈ ಲೋಕದ ತಂದೆಯಿಂದ ಜೀವಪಡೆದ ಮನುಷ್ಯನ ಮಗನು ಎಂಬ ಅರ್ಥವನ್ನು ಸೂಚಿಸುತ್ತದೆ ಎಂಬ ಆಲೋಚನೆಯು ಯೆಹೂದ್ಯರಿಗೆ ಇದ್ದಿಲ್ಲ. **"ಕ್ರಿಸ್ತನು ಸದಾಕಾಲವೂ ಇರುತ್ತಾನೆಂದು ಧರ್ಮಶಾಸ್ತ್ರದಲ್ಲಿ ಕೇಳಿದ್ದೇವೆ; ಹಾಗಾದರೆ ಮನುಷ್ಯಕುಮಾರನು ಮೇಲಕ್ಕೆ ಎತ್ತಲ್ಪಡಬೇಕೆಂದು ನೀನು ಹೇಳುವುದು ಹೇಗೆ? ಆ ಮನುಷ್ಯಕುಮಾರನು ಯಾರು?"** (ಯೋಹಾನ 12:34) ಎಂದು ಅವರು ಕೇಳಿದ ಪ್ರಶ್ನೆಯಲ್ಲಿ ಈ ಸತ್ಯ ಸಂಗತಿಯು ತಿಳಿದು ಬರುತ್ತದೆ. ಯೆಹೂದ್ಯರು ನಿಶ್ಚಯವಾಗಿಯೂ 'ಮನುಷ್ಯಕುಮಾರನು' ಎಂಬ ಮಾತನ್ನು ಗುರುತಿಸಿದ್ದರು. ಮನುಷ್ಯಕುಮಾರನೇ ಮೆಸ್ಸೀಯನು ಎಂಬ ಅವರ ನಿರೀಕ್ಷೆಯು **"ಇಗೋ ಮನುಷ್ಯಕುಮಾರನಂತಿರುವವನು ಆಕಾಶದ ಮೇಘಗಳೊಂದಿಗೆ ಬಂದು ಆ ಮಹಾ ವೃದ್ಧನನ್ನು ಸಮೀಪಿಸಿದನು. ಸಕಲ ಜನಾಂಗ ಕುಲ ಭಾಷೆಗಳವರು ಅವನನ್ನು ಸೇವಿಸಲೆಂದು ಅವನಿಗೆ ದೊರೆತನವೂ ಘನತೆಯೂ ರಾಜ್ಯವೂ ಕೊಡೋಣವಾದವು. ಅವನ ಆಳ್ವಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು, ಅವನ ರಾಜ್ಯವು ಎಂದಿಗೂ ಅಳಿಯದು"** (ದಾನಿಯೇಲ 7:13–14) ಎಂಬ ದಾನಿಯೇಲನ ಮಾತುಗಳ ಮೇಲೆ ಹೆಚ್ಚಾಗಿ ಆಧಾರಗೊಂಡಿದ್ದವು. **"ಇಗೋ, ಪ್ರಕಾಶಮಾನವಾದ ಒಂದು ಮೇಘವು ನನಗೆ ಕಾಣಿಸಿತು. ಆ ಮೇಘದ ಮೇಲೆ ಮನುಷ್ಯಕುಮಾರನಂತಿದ್ದವನೊಬ್ಬನು ಕೂತಿರುವುದನ್ನು ಕಂಡೆನು"** (ಪ್ರಕಟನೆ 14:14) ಎಂಬ ಮಾತುಗಳಿಂದ ನಮ್ಮ ಕರ್ತನು ಈ ವಿವರಣೆಗಳೊಂದಿಗೆ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಇಲ್ಲಿ ಆತನು ತನ್ನನ್ನು **"ಮನುಷ್ಯಕುಮಾರನು, ತನ್ನ ತಲೆಯ ಮೇಲೆ ಬಂಗಾರದ ಕಿರೀಟವುಳ್ಳವನು ಮತ್ತು ಕೈಯಲ್ಲಿ ಹದವಾದ ಕುಡುಗೋಲು ಉಳ್ಳವನೂ"** ಎಂಬಂತೆ ತೋರಿಸಲಾಗಿದೆ. ಇದು ಸುವಾರ್ತಾಯುಗದ ಸುಗ್ಗಿಯನ್ನು ಕೊಯ್ಯುವಾತನು ಎಂಬ ಅರ್ಥ ಸೂಚಿಸುವುದಾಗಿದೆ.

ಆದಾಗ್ಯೂ, ಈ ಶಿರೋನಾಮೆಯು ಯಾವ ಅರ್ಥದಲ್ಲಿಯೂ ಯೋಸೇಫನ ಮಗನನ್ನು ಸೂಚಿಸುವುದಿಲ್ಲವಾದರೂ ಮತ್ತು ಈ ಉದ್ದೇಶಕ್ಕಾಗಿ ತೆಗೆದುಕೊಂಡ ಮಾನವ ಸ್ವಭಾವವು ಸದಾಕಾಲಕ್ಕೂ ತ್ಯಾಗಮಾಡಲ್ಪಟ್ಟಿದೆ ಎಂಬ ಸಾಕ್ಷ್ಯವು ನಿರ್ಧಾರಾತ್ಮಕ ವಾಗಿರುವುದಾದರೂ ಮತ್ತು ಈಗ ಆತನು ಬದುಕಿಸಿರುವ ಆತ್ಮನು ಮೇಲ್ಮಟ್ಟದ್ದಾಗಿರುವುದಾದರೂ (ಇಬ್ರಿಯ 2:09, 16 ; 1 ಪೇತ್ರ 3:18, ಯೋಹಾನ 6:51; ಫಿಲಿಪ್ಪಿ 2:9), ನಮ್ಮ ಕರ್ತನು ಅಂಥಾಃ ಒಂದು ಹೆಸರನ್ನು, ಅಂಥಾಃ ಬಿರುದನ್ನು ಆರಿಸಿಕೊಂಡದ್ದಾದರೂ ಯಾಕೆ? ಎಂಬ ಪ್ರಶ್ನೆಯೊಂದು ಇನ್ನೂ ಸಹಾ ಉದ್ಭವಿಸುತ್ತದೆ. ಇಲ್ಲವಾದಲ್ಲಿ ನಮ್ಮ ಕರ್ತನ ಪ್ರತಿಯೊಂದು ಬಿರುದಿಗೂ ಅದನ್ನು ಅರ್ಥವಾಡಿಕೊಂಡಾಗ ಒಂದು ವಿಶಿಷ್ಟವಾದ ಮಹತ್ವವಿರುವಂತೆ ಇದಕ್ಕೂ ಒಂದು ನಿರ್ದಿಷ್ಟವಾದ ಕಾರಣವಿದ್ದಿರಬೇಕು ಎಂದು ನಮಗೆ ಅನಿಸುವುದಲ್ಲವೇ? ಇಲ್ಲವಾದರೆ ಈ ಬಿರುದಿನ ಉಪಯೋಗವಾಗುತ್ತಿದ್ದಿಲ್ಲ.

ಈ ಬಿರುದಿನ ಉಪಯೋಗಕ್ಕೆ ಬಹಳ ಮುಖ್ಯವಾದ ಕಾರಣವೊಂದುಂಟು. ಇದು ಸ್ವಲ್ಪ ಹೆಚ್ಚಿನ ಗೌರವವುಳ್ಳದ್ದು, ಯಾಕೆಂದರೆ, ಆತನ ಮಹಾ ವಿಜಯದ – ಆತನ ನಿಷ್ಠಾವಂತ, ಪರಲೋಕದ ತಂದೆಯ ಎಲ್ಲಾ ವ್ಯವಸ್ಥೆಗಳಿಗೆ ಮರಣ ಪರ್ಯಂತದ ಅಂದರೆ ಶಿಲುಬೆಯ ಮರಣದವರೆಗೂ ಆತನು ತೋರಿದ ದೀನತೆ ಯಿಂದೊಡಗೂಡಿದ ವಿಧೇಯತೆ, ಇವುಗಳ ಸ್ಥಿರವಾದ ನೆನಪಿಸುವಿಕೆಯನ್ನು ಇದು ಉಂಟು ಮಾಡುವುದಾಗಿದೆ. ಇದರ ಕಾರಣ ಆತನು ಪ್ರಸ್ತುತವಾದ ಮಹಿಮೆ, ವೈಭವ, ಸ್ಥಾನಮಾನ ಮತ್ತು ಶಕ್ತಿಗೆ ತಕ್ಕ ಎಲ್ಲಾ ಬಿರುದಾವಳಿಗಳನ್ನೂ, ದೈವಿಕ ಸ್ವಭಾವವನ್ನೂ ಹೊಂದಿಕೊಂಡಿದ್ದಾನೆ. ಈ ಬಿರುದಿನಿಂದ "ಮನುಷ್ಯ ಕುಮಾರನು" ದೇವದೂತರುಗಳೂ, ಮಾನವರೂ ಇಬ್ಬರೂ ಸಹಾ ದೇವರ ಒಬ್ಬನೇ ಪಡೆದಾತನ ದೀನತೆಯ ನೇರವಾದ ಪ್ರತ್ಯಕ್ಷತೆಗೆ ಮತ್ತು ದೈವಿಕ ಆಳ್ವಿಕೆಯಲ್ಲಿ ಅಡಗಿರುವ – ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು, ಮತ್ತು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು ಎಂಬ ತತ್ವಗಳಡಿಗೆ ಒಳಪಟ್ಟವರಾಗಿದ್ದಾರೆ. ಹೀಗಾಗಿ ಈ ಹೆಸರನ್ನು ಉಪಯೋಗಿಸುವ ಪ್ರತಿಯೊಂದು ಸಮಯದಲ್ಲಿಯೂ ಇದು ದೇವರಿಂದ ಬೋಧಿಸಲ್ಪಡುವವರಿಗೆ ಮತ್ತು ಆತನನ್ನು ಗೌರವಿಸಲು ಮನಸ್ಸುಳ್ಳವರಿಗೆ ಹಾಗೂ ಆತನ

ದೃಷ್ಟಿಗೆ ಒಳ್ಳೆಯದಾಗಿರುವುದನ್ನೇ ಮಾಡ ಬಯಸುವವರಿಗೆ ಅಮೂಲ್ಯವಾದ ಬೋಧನೆಗಳ ಸರಮಾಲೆಯನ್ನೇ ನೀಡುವುದಾಗಿದೆ.

ಇದೇ ಅರ್ಥದಲ್ಲಿ, ನಮ್ಮ ಕರ್ತನು 'ದಾವೀದನ ಸಂತಾನದಲ್ಲಿ' ಹಾಗೂ 'ಅಬ್ರಹಾಮನ' 'ಇಸಾಕನ' ಮತ್ತು 'ಯಾಕೋಬನ' ಸಂತಾನದಲ್ಲಿ ಉಂಟುಮಾಡಲ್ಪಟ್ಟನು, ಮಾತ್ರವಲ್ಲದೆ ಆತನು ತಾಯಿಯಾದ ಹವ್ವಳ ಮೂಲಕ ಆದಾಮನ ಸಂತಾನವೂ ಹೌದು. ಹೀಗಿದ್ದರೂ, ನಾವು ಕಂಡುಕೊಂಡಂತೆ ಆತನು ನಿಷ್ಕಳಂಕನು, ಪಾಪಿಗಳಿಂದ ಪ್ರತ್ಯೇಕಿಸಲ್ಪಟ್ಟವನೂ ಆಗಿದ್ದನು. 'ಸ್ತ್ರೀಯ ಸಂತಾನದವನು' ಎಂಬುದು ಸರ್ಪದ ಸಂತಾನಕ್ಕೆ ಪ್ರತಿರೋಧಿ ಎಂಬುದನ್ನು ಸೂಚಿಸುತ್ತದೆ (ಆದಿ. 3:15). ಆದರೂ ಆದಾಮನಿಂದಲ್ಲದೆ ಹವ್ವಳಿಗೆ ಬೇರೆ ಯಾವ ಸಂತಾನವಾಗಲೀ ಇರುವುದೆಂಬ ಸೂಚನೆ ಇರುವುದಿಲ್ಲ. ಅದೇ ಅರ್ಥದಲ್ಲಿ, ನಮ್ಮ ಕರ್ತನು ದಾವೀದನ ಸಂತಾನದವನು ಎಂದು ಮಾತನಾಡುವುದು ಸೂಕ್ತವಾಗಿದೆ. ಆತನು ಹವ್ವಳ ಮೂಲಕ ಆದಾಮನ ಸಂತಾನದವನು ಎಂದು ಹೇಳುವುದೂ ಅದರಷ್ಟೇ ಸಮರ್ಪಕವಾಗಿದೆ. ಇದುವೇ 'ಮನುಷ್ಯ ಕುಮಾರನು' ಎಂಬ ಬಿರುದಿಗೆ ಹಿನ್ನೆಲೆಯಾಗಿದೆ ಎಂದು ನಾವು ನಂಬುತ್ತೇವೆ.

ಜನಾಂಗಗಳ ತಂದೆಯಾದ, ಮತ್ತು ಅದರ ಜೀವದಾಯಕನೆಂದು ನಿಯುಕ್ತಿಗೊಂಡ ಆದಾಮನು ತನ್ನ ಅವಿಧೇಯತೆಯ ಕಾರಣ ತನ್ನ ಸಂತಾನದವರಿಗೆ ದೀರ್ಘಾಯುಷ್ಯವನ್ನು ಕೊಡುವುದರಲ್ಲಿ ವಿಫಲನಾದನು. ಪರಂತು, ಮೆಸ್ಸೀಯನು ತನ್ನನ್ನು ಆದಾಮನ ಸಂತಾನದಲ್ಲಿ ಗುರುತಿಸಿಕೊಂಡ ಸಮಯದಲ್ಲಿ ನಿರೀಕ್ಷಿಸುತ್ತಿದ್ದ ದೇವರ ವಾಗ್ದಾನವು ಆದಾಮನ ಮತ್ತು ಆತನ ಇಡೀ ಸಂತಾನದವರನ್ನು ಬಿಡುಗಡೆ ಮಾಡುವುದಾಗಿದೆ. ಆದಾಮನು ಎಲ್ಲಕ್ಕೂ ಮೇಲಾಗಿ ಮನುಷ್ಯನಾಗಿದ್ದನು. ಹೀಗಾಗಿ ಆತನು ಮಾನವ ಜನಾಂಗದ ಶಿರಸ್ಸಾಗಿದ್ದನು ಮತ್ತು ಆತನಲ್ಲಿಯೇ ಈ ಭೂಲೋಕದ ಮತ್ತು ಅದರ ಸಾಮ್ರಾಜ್ಯಗಳ ಎಲ್ಲಾ ಬಿರುದುಗಳೂ ಮನೆಮಾಡಿದ್ದವು. ಆದಾಮನ ಬಗ್ಗೆ ಈ ಪ್ರವಾದನೀಯ ನುಡಿಗಳನ್ನು ಗಮನಿಸಿರಿ – **"ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು? ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ. ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ ಅನುಗ್ರಹಿಸಿದಿ; ನೀನು ಎಲ್ಲಾ ಕುರಿದನಗಳನ್ನು ಮಾತ್ರವೇ ಅಲ್ಲದೆ ಕಾಡುಮೃಗಗಳು, ಆಕಾಶಪಕ್ಷಿಗಳು, ಸಮುದ್ರದ ಮೀನುಗಳು, ಅದರಲ್ಲಿ ಸಂಚರಿಸುವ ಸಕಲವಿಧವಾದ ಜೀವಜಂತುಗಳು ಇವೆಲ್ಲವನ್ನೂ ಆತನಿಗೆ ಅಧೀನಮಾಡಿದ್ದೀಯಲ್ಲವೇ"** – ಕೀರ್ತನೆ 8:4–8.

ಈ ಲೋಕದ ಹಕ್ಕು ಬಾಧ್ಯತೆಗಳು, ರಾಜತ್ವ, ಸಾಮ್ರಾಜ್ಯಗಳು, ಅಕ್ರಮಗಳಿಗೆ ತುತ್ತಾದವು, ಪತನದಿಂದ ನಷ್ಟಗೊಂಡವು. ಆದರೂ ಅವುಗಳು ಮಹಾ ಪಾಪಪ್ರಾಯಶ್ಚಿತ್ತ ಬಲಿಯಿಂದ ವಿಮೋಚನೆಗೊಂಡವುಗಳ ಭಾಗಗಳಾಗಿವೆ. ಪ್ರವಾದನೀಯವಾಗಿ ನಮ್ಮ ಕರ್ತನ ಬಗ್ಗೆ ಬರೆದಿರುವಂತೆ **"ನಿನ್ನ ಹಿಂದಿನ ಆಡಳಿತವು ನಿನಗೆ ದೊರೆಯುವುದು, ಯೆರೂಸಲೇಮ್ ಪುರಿಯ ರಾಜ್ಯಾಧಿಕಾರವು ನಿನಗೆ ಲಭಿಸುವುದು"** (ಮೀಕ 4:8). ಈ ರೀತಿಯಲ್ಲಿ ನಾವು ನೋಡುವುದೇನೆಂದರೆ, ದೇವರ ವ್ಯವಸ್ಥೆಯಲ್ಲಿ ಪ್ರಪಂಚದ ನಿರೀಕ್ಷೆಯು ಆದಾಮನ ವಾರಸುದಾರನೂ ಶ್ರೇಷ್ಠ ಪುತ್ರನು, ಅಬ್ರಹಾಮನ ಶ್ರೇಷ್ಠ ಪುತ್ರನು, ದಾವೀದನ ಶ್ರೇಷ್ಠ ಕುಮಾರನ ಮರಿಯಳ ಶ್ರೇಷ್ಠ ಕುಮಾರನ ಬರುವಿಕೆಯ ಮೇಲೆ ಅವಲಂಬಿಸಿದೆ. ಇದು ಈ ಕುಮಾರನ ಜೀವವು ಆದಾಮನ ಅಥವಾ ಅಬ್ರಹಾಮನ ಅಥವಾ ದಾವೀದನ ಅಥವಾ ಮರಿಯಳ ಮೂಲಕ ಬರುವುದೆಂಬ ಅರ್ಥ ನೀಡುವುದಿಲ್ಲ. ನಾವೀಗಾಗಲೇ ನೋಡಿರುವಂತೆ, ದೇವರ ವ್ಯವಸ್ಥೆಯಲ್ಲಿ 'ಸನ್–ಇನ್–ಲಾ' ಸಹಾ ಕುಟುಂಬದ ಸದಸ್ಯನೆಂದು ಎಣಿಸಲಾಗುವುದು ಮತ್ತು ಆತನು ಸಹಾ ವಿಮೋಚನೆ ಮಾಡಬಲ್ಲನು ಮತ್ತು ಮುಟ್ಟುಗೋಲಾದವುಗಳನ್ನು ವಶಪಡಿಸಿಕೊಳ್ಳಬಲ್ಲನು. ನಮ್ಮ ಕರ್ತನ ವಿಷಯದಲ್ಲಿ ಆತನ ಜೀವವು ಈ ಲೋಕದ ತಂದೆತಾಯಿಗಳ ಮೂಲಕ ಬಂದುದಲ್ಲ, ಆದರೆ ಕೇವಲ ಆತನ ಶರೀರ ರಚನೆಯು ಮಾತ್ರವೇ. ಆತನ ಜೀವವು ತಂದೆಯಿಂದಲೇ ಹೊರಟು ಬಂದದ್ದೆಂದು ನಾವು ಸ್ಪಷ್ಟವಾಗಿ ಕಂಡುಕೊಂಡಿದ್ದೇವೆ ಮತ್ತು ಮೂಲತಃ ಲೋಗೋಸ್ ಎಂದು ತಿಳಿದಿದೆ.

ಈ ವಿಚಾರವಾಗಿ ನಾವು ಹೆಚ್ಚಾಗಿ ಪರಿಶೀಲನೆ ಮಾಡುವಾಗ ಮೇಲ್ಕಂಡ ವಿಷಯಗಳ ಹೆಚ್ಚು ಹೆಚ್ಚು ಸಾಕ್ಷ್ಯಗಳು ನಮಗೆ ಕಂಡುಬರುತ್ತವೆ. ಯಾಕೆಂದರೆ ನಮ್ಮ ಕರ್ತನು 'ಮನುಷ್ಯ ಕುಮಾರನು' ಎಂದು ನಿಶ್ಚಯಪೂರ್ವಕವಾಗಿ ಬಳಸಿದ ಎಲ್ಲಾ ಘಟನೆಗಳನ್ನು ಗ್ರೀಕಿನ ವಿದ್ಯಾರ್ಥಿಗಳು ಚೆನ್ನಾಗಿ ಅರಿತುಕೊಳ್ಳಬಹುದು. ಯಾಕೆಂದರೆ, ಇವುಗಳ ವ್ಯತ್ಯಾಸಗಳನ್ನು ಆಂಗ್ಲ ಭಾಷಾಂತರದಲ್ಲಿ ಅಷ್ಟಾಗಿ ಕಾಣಲು ಸಾಧ್ಯವಿಲ್ಲ. ಆಂಗ್ಲ ಭಾಷೆಯಲ್ಲಿ ಮೆಚ್ಚಿಕೊಳ್ಳುವಂತೆ "The" Son, "The" Man ಎಂಬ ಎರಡು ಪದಗಳ ಮೇಲೆ ಸ್ವರಭಾರವನ್ನು ಹಾಕಬೇಕಾಗುವುದು. ಈ ಬಿರುದಿಗೆ ನಮ್ಮ ಕರ್ತನ ಹಕ್ಕು ವಿವಾದರಹಿತವಾಗಿದೆ. ಆದಾಮನು ಮಾತ್ರವೇ ಸಮರ್ಪಕನಾಗಿದ್ದನು ಮತ್ತು ಆದಾಮನ ಸಂತಾನದ ಇತರರೆಲ್ಲರೂ ಅವನತಿ ಹೊಂದಿದ್ದರು. ಈ ಒಬ್ಬ ಮಗನನ್ನು

ಹೊರತುಪಡಿಸಿ, ಈತನು ಆದಾಮನ ಸಂತತಿಗೆ ಅಂಟಿಕೊಂಡಿರುವವನು. ಆದಾಮುನು ಕಳೆದು ಕೊಂಡಿದ್ದೆಲ್ಲವನ್ನು ವಿಮೋಚಿಸಲು ಮತ್ತು ಮನುಕುಲವನ್ನು ವಿಮೋಚಿಸುವ ಕಾರ್ಯದಲ್ಲಿ ತೊಡಗಿದ್ದನಾದ್ದರಿಂದ, ಅಲ್ಲದೇ ಆತನು ಆ ಜನಾಂಗವನ್ನು ಶಾಪದಿಂದ ಮತ್ತು ಮರಣ ಶಿಕ್ಷೆಯಿಂದ ವಿಮೋಚಿಸುತ್ತಾನಾದ ಕಾರಣ ಮನುಷ್ಯ ಕುಮಾರನು (The Son of The man) ಎಂಬ ಬಿರುದು ನ್ಯಾಯಯುತವಾಗಿ ಆತನಿಗೆ ಬಂತು ಮತ್ತು ವಿವಾದಾತೀತವಾಗಿ ಆತನ ಬಳಿಯಲ್ಲಿದೆ.

ಆತನು ಸಮಸ್ತರಿಗೂ ಅರ್ಪಿಸಿದ ಮಹಾ ಈಡುಬಲಿಯ ಕಾಲದಲ್ಲಿ ಆ ಬಿರುದು ಆತನ ಬಳಿಯಲ್ಲಿತ್ತಲ್ಲದೆ, ಅದು ಉಚಿತವಾಗಿ ಸುವಾರ್ತಾ ಯುಗದಲ್ಲಿಯೂ, ಭವ್ಯವಾದ ಪುನಃಸಂದಾನ ಕಾರ್ಯಕ್ಕೆ ಆತನ ಜೊತೆ ಸೇವಕರನ್ನು ಆಯ್ಕೆಮಾಡುವ ಕಾಲದಲ್ಲಿಯೂ ಆತನ ಬಳಿಯಲ್ಲಿದೆ. ಇದಕ್ಕೂ ಹೆಚ್ಚಾಗಿ, ಈ ಬಿರುದು ನಮ್ಮ ಕರ್ತನ ಬಳಿಯಲ್ಲಿ ಮಿಲಿಯಾಂತರ ಯುಗದ ರಾಜ್ಯದಲ್ಲಿಯೂ ಇರುತ್ತದೆ. ಆತನು ಆಗ (ಈಗ ಆತನು ಅತ್ಯುನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ಬದಲಾಗಿದ್ದಾನೆ) 'ಮನುಷ್ಯಕುಮಾರ'ನಾಗಿ (ಆದಾಮನ) ಪುನರ್ ವಶದ ಕಾರ್ಯವನ್ನು ಅಂದರೆ 'ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯನ್ನು ಕೈಗೊಳ್ಳುವನು' – ಎಫೆಸ 1:14 ; ರೂತ 4:1–10.

## ಅವಿಶ್ವಾಸಿಗಳು ದೃಷ್ಟಿಸುವಂತೆ 'ಮಾನವನಾದ ಕ್ರಿಸ್ತ ಯೇಸು'

## "The Man Christ Jesus" as viewed by Unbelievers

ನಮ್ಮ ಕರ್ತನಾದ ಯೇಸುಕ್ರಿಸ್ತನ ವಿವೇಕ ಮತ್ತು ಕೃಪೆಯನ್ನು ಮತ್ತು ಆತನು 'ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣನಾಗಿದ್ದನು' ಎಂಬುದನ್ನು ಆತನ ಶ್ರದ್ಧಾವಂತ ಅನುಯಾಯಿಗಳು ಮಾತ್ರವೇ ಗ್ರಹಿಸಿದ್ದಲ್ಲ, ಆತನು ನಮ್ಮ ಜನಾಂಗದ ಸಾಮಾನ್ಯದವರಿಗಿಂತ ಬಹಳಷ್ಟು ಪ್ರತ್ಯೇಕವಾದವನಾಗಿದ್ದಾನೆ ಎಂಬುದನ್ನು ಆತನ ವಿರೋಧಿಗಳು ಸಹಾ ಗ್ರಹಿಸಿದ್ದರು ಎಂಬುದನ್ನು **"ಎಲ್ಲರೂ ಆತನನ್ನು ಹೊಗಳಿ ಆತನ ಬಾಯಿಂದ ಹೊರಡುವ ಇಂಪಾದ ಮಾತುಗಳಿಗೆ ಆಶ್ಚರ್ಯಪಟ್ಟರು"** (ಲೂಕ 4:22) ಮತ್ತು **"ಈ ಮನುಷ್ಯನು ಮಾತನಾಡುವ ರೀತಿಯಲ್ಲಿ ಯಾರು ಎಂದೂ ಮಾತಾಡಿದ್ದಿಲ್ಲ"** (ಯೋಹಾನ 7:46) ಎಂಬ ಮಾತುಗಳಿಂದ ತಿಳಿಯಬಹುದು. ತಾನೆಂದೂ ಕಾಣದ ಈ ಉತ್ತಮಶೀಲ ಸ್ವಭಾವದ ಯೆಹೂದ್ಯನ ಜೀವವನ್ನು ತೆಗೆಯಲು ಮನಸ್ಸಿಲ್ಲದ ಪಿಲಾತನು, ತನ್ನ ಕಡೆಯ ಪ್ರಯತ್ನವಾಗಿ ಜನಸಮೂಹದ ದುರ್ವಿಚಾರವನ್ನು ಅದು ನಮ್ಮ ಕರ್ತನ ಜನಪ್ರೀಯತೆಯಿಂದ ಅಸೂಯೆಗೊಂಡ ಶಾಸ್ತ್ರಿ ಫರಿಸಾಯರಿಂದ ದುಷ್ಪ್ರೇರಿತವಾದುದೆಂದು ಗ್ರಹಿಸಿ ಅದನ್ನು ಶಮನಗೊಳಿಸಲು ಹೆಣಗಾಡುವವನಾಗಿ ಯೇಸುವನ್ನು ದೈನ್ಯ ಸ್ಥಿತಿಯಲ್ಲಿ (ಆತನಿಗೆ ಮುಳ್ಳಿನ ಕಿರೀಟವನ್ನೂ, ಕೆಂಪು ಒಲ್ಲಿಯನ್ನೂ ತೊಡಿಸಿ) ಅವರ ಮುಂದೆ ತರುವವನಾದನು. ಹೀಗಾದರೂ ಅವರ ಮನ ಕರಗಬಹುದೆಂದು ಭಾವಿಸಿ **"ಇಗೋ ಈ ಮನುಷ್ಯನು !"** ['Behold the Man!'] (ಯೋಹಾನ 19:5) ಎಂದು ಉದ್ಗರಿಸಿದನು. ಆಂಗ್ಲ ಭಾಷಾಂತರದಲ್ಲಿ ಸ್ವರಭಾರದೊಡನೆ **the** ಎಂಬ ಪದವನ್ನು ಹೇಳದ ಹೊರತು ಅದು ಅಷ್ಟು ಅರ್ಥಗರ್ಭಿತವಾಗುವುದಿಲ್ಲ. ಈ ಮಾತುಗಳನ್ನು ಪಿಲಾತನು ನೀವು ಕ್ರೂಜೆಗೆ ಹಾಕಬೇಕೆಂದು ನನ್ನ ಬಳಿಗೆ ತಂದಿರುವ ಈ ಮನುಷ್ಯನು ಎಲ್ಲಾ ಯೆಹೂದ್ಯರಿಗಿಂತ ಶ್ರೇಷ್ಠನಾದ ಯೆಹೂದ್ಯನು ಮಾತ್ರವಲ್ಲ, ಎಲ್ಲಾ ಮನುಷ್ಯರಿಗಿಂತಲೂ ಶ್ರೇಷ್ಠನಾದ ಮನುಷ್ಯನು ಎಂದು ಹೇಳುವುದು ಪಿಲಾತನ ಉದ್ದೇಶವಾಗಿದ್ದಿರಬಹುದು. ನಮ್ಮ ಕರ್ತನ ಮಾನವತ್ವದ ಕುರಿತಾಗಿ ಯೋಹಾನನು ವಿವರಿಸುವಂತೆ – **"ವಾಕ್ಯವೆಂಬಾತನು ನರವತಾರ ಎತ್ತಿ ನಮ್ಮ ಮಧ್ಯೆ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು. ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು"** (ಯೋಹಾನ 1:14) ಎಂದಿದ್ದಾನೆ.

ಈ ಸಂಬಂಧದಲ್ಲಿ ನಾವು ಫ್ರೆಂಚ್ ನಾಗರೀಕರಾದ Rousseau ರವರ "Eulogy of the Son of the man" ಎಂಬ ಜನಪ್ರೀಯ ಉಲ್ಲೇಖವೊಂದನ್ನು ನೆನಪುಮಾಡಿಕೊಳ್ಳೋಣ :–

**ನಮ್ಮ ಸುವಾರ್ತೆಗಳೊಡನೆ ವೇದಾಂತಿಗಳ ಗ್ರಂಥಗಳು ಅದರೆಲ್ಲ ಸಂಭ್ರಮಗಳೊಂದಿಗೆ ಹೋಲಿಸಿನೋಡುವಾಗ, ಅವರದೆಷ್ಟು ಕ್ಷುಲ್ಲಕ! ಆ ಬರಹಗಳು ಒಮ್ಮೆಯಾದರೂ ಅಷ್ಟೊಂದು ಗಂಭೀರವಾಗಿ ಅಷ್ಟೊಂದು ಸರಳವಾಗಿ ಮಾನವರ ಕಾರ್ಯವಾಗಿದೆವೆಯೋ? ಅವರು ಯಾವಾತನ ಜೀವನದ ಬಗ್ಗೆ ಹೇಳುತ್ತಾರೋ ಆತನು ಮಾನವರಿಗಿಂತ ಮೇಲಾದವನು ಅಲ್ಲವೋ? ಆತನ ಗುಣಲಕ್ಷಣಗಳಲ್ಲಿ ಆತನು ಅತ್ಯುತ್ಸಾಹಿ ಅಥವಾ ಆಕಾಂಕ್ಷ ಪಂಥಕ್ಕೊಳಗಾದವನೆಂದು ತೋರಿಬರುತ್ತದೆಯೋ? ಆತನ ಹಾದಿಯಲ್ಲಿ ಎಂಥಹ ಮಧುರತೆ, ಎಂಥಹ ಶುಭ್ರತೆಗಳಿವೆ ! ಆತನ ಬೋಧನೆಗಳಲ್ಲಿ ಎಂಥಹ ಮನಮುಟ್ಟುವ ಎಂಥಹ ಕೃಪಾ ಲಕ್ಷಣಗಳಿವೆ? ಆತನ ನೀತಿವಾಕ್ಯಗಳಲ್ಲಿ ಯಾವ ಆಡಂಭರಗಳಿವೆ? ಆತನ ಮಾತುಗಳಲ್ಲಿ ಯಾವ ಅಗಾಧವಾದ ಜ್ಞಾನ ವಿವೇಕಗಳಿವೆ? ಅಲ್ಲವೇ! ಎಂಥಹ ಸಮಯಪ್ರಜ್ಞೆ, ಯಾವ ಸೂಕ್ಷ್ಮತೆ ಮತ್ತು ಶೀಘ್ರಪ್ರವೃತ್ತಿಗಳು ಆತನ ಉತ್ತರಗಳಲ್ಲಿ ಇವೆ! ಆತನ**

ಅನುರಾಗಗಳ ಮೇಲೆ ಎಂಥಹ ಸಾಮ್ರಾಜ್ಯವಿದೆ! ಯಾವ ಬಲಹೀನತೆಗಳಿಲ್ಲದೆ, ಯಾವ ತೋರಿಕೆಗಳಿಲ್ಲದೆ ಯಾವ ರೀತಿಯಲ್ಲಿ ಅಭಿನಯಿಸಬೇಕು, ಯಾವ ರೀತಿಯಲ್ಲಿ ಶ್ರಮೆ ಅನುಭವಿಸಬೇಕು ಮತ್ತು ಸಾಯಬೇಕು ಎಂದು ತಿಳಿದಾಗ ಆ ಮನುಷ್ಯನೆಲ್ಲಿ, ಆ ಸಾಧುವೆಲ್ಲಿ ? ನನ್ನ ಸ್ನೇಹಿತರೆ, ಜನರು ಈ ರೀತಿಯಾಗಿ ಕಲ್ಪಿಸಿರುವುದಿಲ್ಲ; ಸಾಕ್ರೇಟಿಸ್ ಎಂಬಾತನ ಬಗ್ಗೆ ಇರುವ ಸತ್ಯತೆಗಳು ಯೇಸುವಿನ ಬಗ್ಗೆಯಷ್ಟು ಪ್ರಾಮಾಣೀಕರಿಸಲ್ಪಟ್ಟಿರಲಿಲ್ಲ ಎಂಬುದನ್ನು ಯಾರೂ ಸಂದೇಹಿಸಲಾರರು. ಆ ಯೆಹೂದ್ಯರಿಗೆ ಎಂದಿಗೂ ಈ ರೀತಿಯ ನೀತಿಧರ್ಮದ ಸ್ವರ ಮತ್ತು ಆಲೋಚನೆಗಳು ಹೊಳೆದಿರಲಿಲ್ಲ. ಮತ್ತು ಸುವಾರ್ತೆಗಳಲ್ಲಿ ಸತ್ಯತೆಯ ಗುಣಲಕ್ಷಣಗಳೂ ಎಷ್ಟೋ ಭವ್ಯವಾಗಿ, ಮನದ ಮೇಲೆ ಅಚ್ಚೊತ್ತುವಂತೆ ಎಷ್ಟೋ ಸಮರ್ಪಕವಾಗಿ ಅಪ್ರತಿಮವಾಗಿವೆ ಮತ್ತು ಅವುಗಳ ಶೋಧಕರು ಅವರು ವರ್ಣಿಸುವಾತನಿಗಿಂತಲೂ ಅದ್ಭುತರಾಗಿ ಕಂಡುಬರುತ್ತಾರೆ"

ನೆಪೋಲಿಯನ್ ಬೋನೋಪಾರ್ಟಿಯ 'ಮನುಷ್ಯ ಕುಮಾರ'ನ ಕುರಿತಾದ ಮತ್ತೊಂದು ಸ್ತುತಿಯು ಇಂತಿದೆ:

"ಆದಿಯಿಂದ ಅಂತ್ಯದವರೆಗೂ ಯೇಸುವು ಹಾಗೆಯೇ ಇದ್ದಾನೆ: ಎಂದೆಂದಿಗೂ ಹಾಗೆಯೇ ಇದ್ದಾನೆ – ಗಂಭೀರ ಮತ್ತು ಸರಳ. ಸಾದ್ಯಂತವಾಗಿ ಆತನ ಜೀವಿತವು ಸಾರ್ವಜನಿಕ ಕಣ್ಣಿನಡಿಯಲ್ಲಿ ಸಾಗಿದೆಯಾದರೂ ಒಮ್ಮೆಯೂ ಅವರಿಗೆ ಆತನಲ್ಲಿ ತಪ್ಪು ಕಂಡುಕೊಳ್ಳುವ ಅವಕಾಶ ಆತನು ನೀಡಲೇ ಇಲ್ಲ. ಆತನ ನಡತೆಯ ದೂರದೃಷ್ಟಿಯು ನಮ್ಮೆಲ್ಲರ ಮೆಚ್ಚಿಗೆಯನ್ನು ಪ್ರಭಾವದಿಂದಲೂ, ಸೌಮ್ಯವಾಗಿಯೂ ಒತ್ತಾಯಿಸುತ್ತದೆ. ಆತನು ತನ್ನ ಮಾತುಗಳಲ್ಲಿಯೂ, ಕ್ರಿಯೆಗಳಲ್ಲಿಯೂ ಏಕಪ್ರಕಾರವಾಗಿದ್ದಾನೆ, ಮತ್ತು ಜ್ಞಾನೋದಯವನ್ನು, ಸ್ಥಿರತೆಯನ್ನು ಮತ್ತು ಶಾಂತತೆಯನ್ನು ಹೊಂದಿದವನಾಗಿದ್ದಾನೆ. ಉದಾತ್ತತೆಯು ದೈವತ್ವಕ್ಕೆ ಆರೋಪಿಸಲ್ಪಟ್ಟಿದೆ ಎಂದು ಹೇಳುತ್ತಾರೆ; ಹಾಗಾದರೆ ಯಾವಾತನ ಗುಣಲಕ್ಷಣಗಳಲ್ಲಿ ಉದಾತ್ತತೆಯ ಒಂದೊಂದು ಅಂಶವೂ ಕೂಡಿದೆಯೋ ಅದಕ್ಕೆ ನಾವು ಯಾವ ಹೆಸರನ್ನು ನೀಡಬಹುದು? "

"ನಾನು ಮನುಷ್ಯರನ್ನು ಬಲ್ಲೆ, ನಾನು ಹೇಳುವುದೇನೆಂದರೆ ಯೇಸು ಒಬ್ಬ ಮನುಷ್ಯನಲ್ಲ. ಆತನಲ್ಲಿರುವ ಪ್ರತಿಯೊಂದು ಸಂಗತಿಯೂ ನನಗೆ ವಿಸ್ಮಯವನ್ನುಂಟುಮಾಡುವುದಾಗಿದೆ. ಆತನನ್ನು ಪ್ರಪಂಚದ ಇತರ ಯಾವುದೇ ವ್ಯಕ್ತಿಯೊಡನೆ ಹೋಲಿಸಲು ಅಸಾಧ್ಯ! ಆತನು ಸತ್ಯವಾಗಿ ತನ್ನಲ್ಲಿಯೇ ಓರ್ವ ವ್ಯಕ್ತಿಯಾಗಿದ್ದಾನೆ. ಆತನ ಭಾವನೆಗಳು ಮತ್ತು ಆತನ ಚಿತ್ತವೃತ್ತಿಯು, ಆತನು ಪ್ರಕಟಿಸುವ ಸತ್ಯವು, ಆತನ ಸಮಾಲೋಚನಾ ಸಭೆಗಳ ರೀತಿ ಇವೆಲ್ಲವೂ ಮಾನವ ಕಲ್ಪನೆಗಳಿಗೆ ಮತ್ತು ಸಂಗತಿಗಳ ಸ್ವಾಭಾವಿಕ ಕ್ರಮಗಳಿಗೆ ಮೀರಿದವುಗಳು. ಆತನ ಜನನ, ಆತನ ಜೀವನ ಚರಿತ್ರೆ, ಎಲ್ಲಾ ಕಷ್ಟಗಳನ್ನು ಬುಡಮೇಲು ಮಾಡಿ ಅದರ ಸಂಪೂರ್ಣ ನಿವಾರಣೆ ನೀಡಬಲ್ಲ ಆತನ ಸಿದ್ಧಾಂತಗಳ ಅಗಾಧತೆ ಇವುಗಳು, ಆತನ ಸುವಾರ್ತೆ; ಆ ರಹಸ್ಯಗರ್ಭಿತವಾದ ವ್ಯಕ್ತಿತ್ವ, ಸ್ವರೂಪ, ಆತನ ಸಾಮ್ರಾಜ್ಯ, ಶತಮಾನಗಳಲ್ಲಿನ ಆತನ ಪ್ರಗತಿ ಮತ್ತು ರಾಜ್ಯಗಳು ಇವೆಲ್ಲವುಗಳೂ ನನಗೆ ಅತ್ಯದ್ಭುತವಾದ ಆಳ ಎಷ್ಟೆಂಬುದನ್ನು ನೋಡಲು ಅಸಾಧ್ಯವಾದ ರಹಸ್ಯ ಸಂಗತಿಗಳಾಗಿವೆ. ನಾನಿಲ್ಲಿ ಮನುಷ್ಯನ ಯಾವ ಸಂಗತಿಯನ್ನೂ ಕಾಣುತ್ತಿಲ್ಲ. ನಾನು ಎಷ್ಟು ಹತ್ತಿರವಾಗಿ ಸಮೀಪಿಸುತ್ತೇನೋ, ಎಷ್ಟು ಹತ್ತಿರದಿಂದ ಪರೀಕ್ಷಿಸುತ್ತೇನೋ ಎಲ್ಲವೂ ಹೋಲಿಕೆಗೆ ಮೀರಿದ್ದಾಗಿ ಉಳಿದುಕೊಳ್ಳುತ್ತವೆ – ಶ್ರೇಷ್ಟತೆಯ ಶ್ರೇಷ್ಟತೆಯಲ್ಲಿ ನನ್ನನ್ನು ಜಜ್ಜಿ ಬಿಡುತ್ತವೆ. ಎಲ್ಲವೂ ಉತ್ತರದಾಯಿಯಾಗಿಲ್ಲವೆಂದು ವ್ಯರ್ಥತೆಯಿಂದ ನಾನು ಪ್ರತಿಫಲಿಸುತ್ತೇನೆ! ಕ್ರಿಸ್ತನ ರೀತಿಯ ಮತ್ತೊಂದು ಜೀವನವನ್ನು ಎತ್ತಿಹೇಳುವಂತೆ ನಾನು ನಿಮಗೆ ಪಂಥಾಹ್ವಾನ ನೀಡುವವನಾಗಿದ್ದೇನೆ ".

ಹೌದು, ಸತ್ಯವು ಕಲ್ಪನಾ ಕಥೆಗಳಿಗಿಂತಲೂ ಅಪರಿಚಿತವಾಗಿರುತ್ತದೆ ಮತ್ತು ಸರ್ವಸಂಪೂರ್ಣ ಮನುಷ್ಯನಾದ ಯೇಸು ಕ್ರಿಸ್ತನು, ಉನ್ನತೋನ್ನತದಿಂದ ಅಭಿಷೇಕಿಸಲ್ಪಟ್ಟವನು ಆತನು ವಿಮೋಚನೆಗಾಗಿ ತನ್ನ ವಶಕ್ಕೆ ಪಡಕೊಂಡ ಅಸಂಪೂರ್ಣ ಜನಾಂಗದವರಿಂದ ಎಷ್ಟೋ ವ್ಯತ್ಯಾಸವುಳ್ಳವನಾಗಿದ್ದನು. ಆದುದರಿಂದ, ಆತನು ಮಾನವರಿಗಿಂತ ಹೆಚ್ಚಾದವನಲ್ಲವೋ? ಎಂದು ಪ್ರಶ್ನಿಸುವ ಈ ಪ್ರಪಂಚದವರನ್ನು ಕ್ಷಮಿಸಬಹುದಾಗಿದೆ. ಖಚಿತವಾಗಿಯೂ ಆತನು ಕೇವಲರಾದ ಮನುಷ್ಯರಿಗಿಂತ ಎಷ್ಟೋ ಮಿಗಿಲಾದವನು. – ಪಾಪಿ ಮಾನವರಿಗಿಂತ ಎಷ್ಟೋ ಹೆಚ್ಚಿನವನು; ಆತನು ಪಾಪಿಗಳಿಂದ ಪ್ರತ್ಯೇಕವಾದವನು ಮತ್ತು ಓರ್ವ ಸರ್ವ ಸಂಪೂರ್ಣ ಮನುಷ್ಯನಾಗಿ ಆತನು ಅದೃಶ್ಯನಾದ ದೇವರ ಪ್ರತಿರೂಪಿಯಾಗಿದ್ದಾನೆ.

## ಅವನಲ್ಲಿ ನಾವು ನೋಡತಕ್ಕ ಯಾವ ಲಕ್ಷಣಗಳೂ, ಅಂದಚಂದಗಳೂ ಇರಲಿಲ್ಲ

## "No Beauty in Him That We Should Desire Him"

"ಅವನಲ್ಲಿ ಯಾವ ಅಂದಚಂದಗಳೂ ಇರಲಿಲ್ಲ; ನಾವು ಅವನನ್ನು ನೋಡಿದಾಗ ನೋಡತಕ್ಕ ಯಾವ ಲಕ್ಷಣವೂ ಕಾಣಲಿಲ್ಲ. ಅವನು ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನು, ಸಂಕಷ್ಟಕ್ಕೆ ಒಳಗಾದವನು, ವ್ಯಾಧಿಪೀಡಿತನು, ಜನರು ಮುಖವನ್ನು ಓರೆಮಾಡಿಕೊಳ್ಳುವ ಧಿಕ್ಕಾರಕ್ಕೆ ಒಳಗಾದವನೂ ಆಗಿದ್ದನು" – **ಯೆಶಾಯ 53:2–3.**

ಕೆಲವರು ನಮ್ಮ ಕರ್ತನ ವ್ಯಕ್ತಿಗತ ಚಹರೆಯು ಇತರ ಮನುಷ್ಯರಿಗಿಂತ ಕೀಳುಮಟ್ಟದಾಗಿತ್ತೆಂದು ಈ ದೇವರ ವಾಕ್ಯದ ಭಾಗಗಳು ಸೂಚಿಸುತ್ತವೆಂಬ ಸಲಹೆಮಾಡುತ್ತಾರೆ ಮತ್ತು ಈ ಕಾರಣದಿಂದ ಆತನು ಪಾಪಿಗಳಿಂದ ಪ್ರತ್ಯೇಕವಾದವನಲ್ಲ, ಪಾಪದಲ್ಲಿಯೂ ಅದರ ದಂಡನೆಯಾದ ಭ್ರಷ್ಟತೆಯಲ್ಲಿಯೂ ಆತನು ಭಾಗಿಯಾಗಿದ್ದವನು ಎಂದು ವಾದಿಸುತ್ತಾರೆ. ನಾವು ಇದಕ್ಕೆ ಅಸಮ್ಮತಿ ಸೂಚಿಸುವವರಾಗಿದ್ದೇವೆ. ಆದಾಗ್ಯೂ ಸುವಾರ್ತೆಯಲ್ಲಿನ ಸಮಗ್ರ ಸಾಕ್ಷ್ಯಗಳ ಧೋರಣೆಗೆ ವ್ಯತಿರಿಕ್ತವಾಗಿ, ಮತ್ತು ಈ ವಿಷಯದಲ್ಲಿ ದೇವರ ವಾಕ್ಯದ ಸಾಮಾನ್ಯ ಹೇಳಿಕೆಗಳೆಡೆಗೆ ವಾಲಿಸುವ ಸಲುವಾಗಿ, ಈ ಹೇಳಿಕೆಗಳನ್ನು ಅರ್ಥವಿವರಣೆಯ ಯುಕ್ತವಾದ ತತ್ವಗಳಿಗೆ ಯಾವುದೇ ದಕ್ಕೆಯುಂಟಾಗದಂತೆ ಮಾಡಿ ತೋರಿಸಬಹುದೆಂದು ನಾವು ಆಲೋಚಿಸುತ್ತೇವೆ.

ಅನೇಕ ವಿಧವಾದ ಗೌರವತೆಗಳು, ಸೌಂದರ್ಯ, ಅಂದಚಂದ ಇರುತ್ತವೆ– ಮತ್ತು ಬೇರೆ ಬೇರೆ ಜನರ ಆದರ್ಶಗಳು, ಮತ್ತು ಬೇರೆ ಬೇರೆ ಸಂಧರ್ಭಗಳಲ್ಲಿ ಅದೇ ಜನರ ಆದರ್ಶಗಳು ಭಿನ್ನವಾಗಿ ಎದ್ದುಕಾಣುತ್ತವೆ. ಅನಾಗರೀಕರ ಸೌಂದರ್ಯ ತೃಪ್ತಿಯ ಆದರ್ಶವು ಹೆಚ್ಚು ನಾಗರೀಕರಾದವರಿಗೆ ಹೇಸಿಗೆಯದಾಗಿರುತ್ತದೆ. ಕೆಂಪು ಮತ್ತು ಹಳದಿ ಬಣ್ಣಗಳಿಂದ ಚಿತ್ರಿಸಿ, ಅದಕ್ಕೆ ಚಿಪ್ಪುಗಳನ್ನು ಮತ್ತು ಒಣಗಿದ ಗರಿಗಳನ್ನು ಅಂಟಿಸಿದ ಮತ್ತು ಚರ್ಮದ ಸೊಂಟಪಟ್ಟಿಯುಳ್ಳ ರೆಡ್ ಇಂಡಿಯನ್ ಯೋಧನ ಚಿತ್ರವು ಕೆಲವೊಂದು ನಿರ್ದಿಷ್ಟ ಕಾಡು ಜನರ ಮನಸ್ಸಿಗೆ ಅದರ್ಶವಾಗಿ ತೋರಿಬರಬಹುದು. ಬಹುಮಾನ ವರ್ತುಲದಲ್ಲಿ ಕದನಕ್ಕಾಗಿ ಬಟ್ಟೆ ಬಿಚ್ಚಿರುವ ಮುಷ್ಟಿಕಾಳಗದವನ ಶೂರ ಚಿತ್ರಣದ ಆದರ್ಶವಾಗಿ ಕಂಡುಬರಬಹುದು. ಇತರರಿಗೆ ಶ್ರೀಮಂತವಾಗಿ ಪೋಷಾಕು ಧರಿಸಿದ ಗೂಳಿಕಾಳಗ ಮಾಡುವವನು ಅನೇಕರಿಗೆ ಆದರ್ಶನಾಗಿ ಕಂಡುಬಂದು ಜನಸಮೂಹದ ಚಪ್ಪಾಳೆಗಳಿಗೆ ಪಾತ್ರನಾಗಬಹುದು. ಈ ರೀತಿಯಲ್ಲಿ ಆದರ್ಶಗಳು ಕಾಲಕ್ಕೆ, ಸನ್ನಿವೇಶಕ್ಕೆ, ಸ್ಥಿತಿಗತಿಗಳಿಗೆ ತಕ್ಕಂತೆ ಬದಲಾಗುತ್ತಾ ಹೋಗುತ್ತವೆ. ಅದೇ ರೀತಿಯಲ್ಲಿ ಈ ದೇವರ ವಾಕ್ಯಗಳು ನಮ್ಮ ಕರ್ತನ ಮೊದಲನೆಯ ಬರೋಣಕ್ಕೆ ಸಂಬಂಧಿಸಿರುವ ಕಾರಣ ಆತನು ಯೆಹೂದ್ಯ ಆದರ್ಶಗಳಿಗೆ ತಕ್ಕಂತೆ ಬರಲಿಲ್ಲವೆಂದು ಸೂಚಿಸುತ್ತವೆ ಎಂದು ಅರ್ಥಮಾಡಿಕೊಳ್ಳಬೇಕು. 'ಈ ಮನುಷ್ಯನನ್ನು ನೋಡಿರಿ!" ಎಂಬ ಪಿಲಾತನ ಉದ್ಗಾರದಲ್ಲಿಯೂ ಅದೇ ಮಾತಿಗೆ ಅವರೆಲ್ಲರೂ (ಯೋಹಾನ 19:4–6 ನೋಡಿರಿ) ಒಕ್ಕೊರಲಾಗಿ **"ಆತನನ್ನು ಶಿಲುಬೆಗೆ ಹಾಕಿಸು, ಶಿಲುಬೆಗೆ ಹಾಕಿಸು, ನಮಗೆ ಕೈಸರನಲ್ಲದೆ ಬೇರೆ ರಾಜನಿಲ್ಲ"** ಎಂದು ಕೂಗಿ ಹೇಳಿದ್ದರಲ್ಲಿ ಈ ಸಂಗತಿಯು ಮತ್ತಷ್ಟು ವಿಶದವಾಗುತ್ತದೆ.

ಕ್ರಿಸ್ತನ ಪ್ರಥಮ ಆಗಮನ ಸಮಯದಲ್ಲಿ ಯೆಹೂದ್ಯ ಜನಾಂಗದವರು ಆರುನೂರು ವರ್ಷಕ್ಕೂ ಹೆಚ್ಚು ಕಾಲದಿಂದ ರೋಮನ್ನರ ದಾಸತ್ವದ ನೊಗಕ್ಕೆ ಸಿಲುಕಿದ್ದರು ಮತ್ತು ಅನ್ಯಜನಗಳ ತುಳಿತಕ್ಕೆ ಅವರು ಒಳಗಾಗಿದ್ದರೆಂಬುದನ್ನು ನಾವಿಲ್ಲಿ ನೆನಪು ಮಾಡಿಕೊಳ್ಳಬೇಕು. ನಾವು ಇಸ್ರಾಯೇಲ್ಯರ ನಿರೀಕ್ಷೆ, ಅಬ್ರಹಾಮ, ಇಸಾಕ ಯಾಕೋಬರಿಗೆ ತಕ್ಕ ಸಮಯದಲ್ಲಿ ಅವರಿಗೊಬ್ಬ ಅಭಿಷಕ್ತನನ್ನು (ಮೆಸ್ಸೀಯನನ್ನು) ಕಳುಹಿಸುತ್ತೇನೆಂದು ದೇವರು ನೀಡಿದ ವಾಗ್ದಾನಗಳು, ಅವುಗಳನ್ನು ಅನೇಕ ಪ್ರವಾದಿಗಳು ಅವನ್ನು ಪುನರುಚ್ಚರಿಸಿದ್ದು ಇವುಗಳನ್ನು ಸಹಾ ನಾವು ನೆನಪಿಸಿಕೊಳ್ಳಬೇಕು. ಈ ಅಭಿಷಕ್ತನು ಮೋಶೆಗೂ ಮಿಗಿಲಾದ ಧರ್ಮಶಾಸ್ತ್ರವನ್ನು ಅವರಿಗೆ ನೀಡುವವನಾಗಿದ್ದಾನೆ, ಯೆಹೋಶುವನಿಗಿಂತಲೂ ಮಿಗಿಲಾದ ಸೇನಾಧಿಪತಿ ಆಗಿದ್ದಾನೆ ಮತ್ತು ದಾವೀದ, ಸೊಲೊಮೋನರಿಗಿಂತಲೂ ಶ್ರೇಷ್ಠನಾದ ರಾಜನಾಗಿದ್ದಾನೆ ಎಂಬುದನ್ನು ಅವರು ತಿಳಿದಿರಬೇಕು. ಈ ಸಮಯದಲ್ಲಿ ಅವರುಗಳು ಅವರ ಆದರ್ಶಗಳಿಗೆ ತಕ್ಕಂಥಾಃ ಓರ್ವ ಮೆಸ್ಸೀಯನ ನಿರೀಕ್ಷೆಯಲ್ಲಿದ್ದರು. ಯಾಕೆಂದರೆ ಎಲ್ಲರೂ ಮೆಸ್ಸೀಯನ ನಿರೀಕ್ಷೆಯಲ್ಲಿದ್ದರು ಎಂದು ಬರೆಯಲ್ಪಟ್ಟಿದೆ. ಆದರೆ ಯೇಸುವನ್ನು ಮೆಸ್ಸೀಯನೆಂದು ಪ್ರಕಟಿಸಿದಾಗ, ಆತನ ಸಮರ್ಪಣೆಯು ಅವರ ನಿರೀಕ್ಷೆಗಿಂತ ಬಹಳಷ್ಟು ಬೇರೆಯಾಗಿತ್ತು. ಹೀಗಾಗಿ ಅವರ ಅಹಂಕಾರದ ಹೃದಯಗಳ ದೆಸೆಯಿಂದ ಆತನ ನಿಮಿತ್ತ ಅಪಮಾನಕ್ಕೊಳಗಾದರು; ಹೀಗಾಗಿ ಅವರು ಆತನಿಂದ ತಮ್ಮ ಮೋರೆಗಳನ್ನು ಮರೆಮಾಡಿಕೊಂಡರು – ಆತನಿಗೆ ತಮ್ಮ ಬೆನ್ನುಗಳನ್ನು ತಿರುಗಿಸಿದರು. ವಿಶೇಷವಾಗಿ ಸಾಮಾನ್ಯ ಜನರಿಗೆ ಮಾರ್ಗದರ್ಶನ ಮಾಡಬೇಕಾದ ನಾಯಕರುಗಳು ಪ್ರಮುಖ ವ್ಯಕ್ತಿಗಳು ಈ ರೀತಿಯಾಗಿ ನಡೆದುಕೊಂಡರು – ಲೂಕ 3:15.

ಅವರೊಬ್ಬ ಮಹಾ ಸೇನಾಪತಿಯನ್ನು, ಮಹಾ ಅರಸನನ್ನು ಮತ್ತು ಘನತೆ, ಧರ್ಪದಿಂದೊಡಗೂಡಿದ ನೂತನ ಧರ್ಮಶಾಸ್ತ್ರ ನೀಡುವಾತನನ್ನು, ಹೆಮ್ಮೆ, ಸ್ವಯಂ ಇಚ್ಛೆ, ಮತ್ತು ಮಾತು ಹಾಗೂ ಕ್ರಿಯೆಗಳಲ್ಲಿ ಗರ್ವ ಮತ್ತು ದೌರ್ಜನ್ಯಗಳು ತುಂಬಿರುವ ಒಬ್ಬ ಅರಸನನ್ನು ನಿರೀಕ್ಷಿಸುತ್ತಿದ್ದರು. ಈ ಲೋಕವನ್ನು ಆಳಬಲ್ಲಾತನು ಮತ್ತು ಇಸ್ರೇಲನ್ನು ಮುಂದುವರಿದ ದೇಶವನ್ನಾಗಿ ಮಾಡಬಲ್ಲಾತನು ಇವುಗಳಿಂದ ರಚಿಸಲ್ಪಟ್ಟಿರಬೇಕೆಂಬುದು ಅವರ ಆದರ್ಶವಾಗಿತ್ತು. ಅವರು ಹೆರೋದನ ಗರ್ವ, ಉದ್ಧಟತನ, ಸೊಕ್ಕು ಇವುಗಳನ್ನು ಕಂಡಿದ್ದರು ; ರೋಮಿನ ಎಲ್ಲಾ ಸೇನಾಪತಿಗಳು, ಶತಾಧಿಪತಿಗಳು, ರಾಜ್ಯಪಾಲರು ಗಳಲ್ಲಿಯೂ ಅವರು ಇದನ್ನೇ ಕಂಡಿದ್ದರು. ಹೀಗಾಗಿ ರೋಮಿನ ಚಕ್ರವರ್ತಿ ಈ ಎಲ್ಲಾ ಗುಣಗಳಲ್ಲಿ ಇನ್ನೂ ಬಲಯುತನಾಗಿದ್ದು ಚಕ್ರಾಧಿಪತ್ಯದಲ್ಲಿ ಅಧಿಕ

ಪ್ರಾಬಲ್ಯತೆಯಿಂದ ಕೂಡಿರುತ್ತಾನೆಂದು ಅವರು ಊಹಿಸಿದ್ದರು. ಇವುಗಳಿಂದ ತಮ್ಮ ಸಂಕೇತಗಳನ್ನು ತೆಗೆದು ಕೊಂಡವರಾಗಿ ಅವರು ಯೆಹೂದ್ಯರ ಅರಸನೆನಿಸಿಕೊಳ್ಳುವ ಮೆಸ್ಸೀಯನು ಸಹಾ ಇವುಗಳಲ್ಲಿ ಹೆಚ್ಚಿನ ಗುಣವನ್ನು ಹೊಂದಿಕೊಂಡು, ಇನ್ನೂ ಹೆಚ್ಚಿನ ಘನತೆ, ಗೌರವ ಮತ್ತು ಪರಲೋಕದ ವೈಭವದಿಂದೊಡಗೂಡಿರುತ್ತಾನೆ ಮತ್ತು ಇವುಗಳನ್ನು ಈ ಲೋಕಕ್ಕೆ ರವಾನಿಸುತ್ತಾನೆ ಎಂಬುದು ಅವರ ನಿರೀಕ್ಷೆಯಾಗಿತ್ತು.

ಇಂಥಾಃ ನಿರೀಕ್ಷೆಗಳನ್ನಿಟ್ಟುಕೊಂಡ ಅವರು ಕೇವಲ ಸಾಧು ಸ್ವಭಾವದ, ದೀನನಾದ ನಜ಼ರೇತಿನ ಒಬ್ಬಾತನನ್ನು ತಮ್ಮ ಮೆಸ್ಸೀಯನೆಂದು ಅಂಗೀಕರಿಸಲು ಸಿದ್ಧರಾಗದಿರುವುದು ಆಶ್ಚರ್ಯವೇನಲ್ಲ. ಯಾಕೆಂದರೆ ಆತನು ಸುಂಕದವರನ್ನು, ಪಾಪಿಗಳನ್ನು ತನ್ನ ಸಂಗಡಿಗರನ್ನಾಗಿ ಸೇರಿಸಿಕೊಂಡನು. ಈ ಲೋಕವನ್ನು ಗೆಲ್ಲಲು ಅವರ ಬಳಿಯಲ್ಲಿದ್ದ ಅಸ್ತ್ರವೆಂದರೆ 'ಆತನ ಬಾಯ ಮಾತುಗಳೆಂಬ ಕತ್ತಿ' ಮಾತ್ರ. ಆತನು ಇಸ್ರಾಯೇಲ್ಯರ ನಿರೀಕ್ಷೆಯಾದ, ಯೆಹೂದ್ಯರ ಅರಸನು, ಮೆಸ್ಸೀಯನು ಎಂಬುದನ್ನು ಅವರಿಗೆ ಪ್ರಕಟಿಸಿದಾಗ ಅವರು ಆತನಿಗೆ ಬೆನ್ನುತಿರುಗಿಸಿದಕ್ಕೆ ಆಶ್ಚರ್ಯಪಡಬೇಕಾದ್ದಿಲ್ಲ. ಅವರಲ್ಲಿ ಬಹುಕಾಲದಿಂದ ಅಂಟಿಕೊಂಡು ಬಂದಿದ್ದ ಸುಳ್ಳು ನಿರೀಕ್ಷೆಗಳ ಮೂಲಕ ಅವರು ಭಯಂಕರವಾಗಿ ಆಶಾಭಂಗಗೊಂಡದ್ದು ಆಶ್ಚರ್ಯವಲ್ಲ. ಅವರು ಯೇಸುವನ್ನು 'ಯೆಹೂದ್ಯರ ಅರಸ'ನನ್ನಾಗಿ ಅಂಗೀಕರಿಸಲು ನಾಚಿಕೆಪಟ್ಟದ್ದೂ, "ಆತನ ಅಂದಚಂದಗಳು, ಗೌರವ ಮತ್ತು ಘನತೆಗಳು"ನಮಗೆ ತಕ್ಕವುಗಳಲ್ಲ, ನಮ್ಮ ಜನಾಂಗದ ಅಗತ್ಯತೆಗಳನ್ನು ಪೂರೈಸುವಂತೆ ನಮ್ಮ ದೀರ್ಘಕಾಲದ ಆಕಾಂಕ್ಷೆಗಳನ್ನು ಪೂರೈಸುವಂತೆ ಆತನಲ್ಲಿ ಓರ್ವ ವೀರ ಯೋಧನಾಗುವ, ರಾಜನೀತಿ ಮುತ್ಸದ್ದಿಯಾಗುವ, ರಾಜನಾಗುವ ಅರ್ಹತೆಯಾಗಲೀ ಆದರ್ಶವಾಗಲಿ ಇಲ್ಲ" ಎಂದು ಅವರು ಹೇಳಿದ್ದರೆ ಅದಕ್ಕಾಗಿ ನಾವು ಆಶ್ಚರ್ಯ ಪಡಬೇಕಾದ್ದಿಲ್ಲ. ಅಹಾ, ಹೌದು! ಅದೇ ವರ್ಗದವರಂತೆ ಕೆಲವರು ಇಂದು ಮೆಸ್ಸೀಯನ ಎರಡನೆಯ ಆಗಮನವನ್ನು ನಿರೀಕ್ಷಿಸುತ್ತಿರುವರು. ಅವರು ತಮ್ಮ ಈ ನಿರೀಕ್ಷೆಗಳು 'ಹಿರಿಯರಿಂದ ಬಂದ ಸಂಪ್ರದಾಯ'ದ ಮೇಲೆ ಆತುಕೊಂಡಿದೆ ಎಂದು ಹಗುರವಾಗಿ ಭಾವಿಸಿದ್ದಾರೆ ಮತ್ತು ಅದಕ್ಕೆ ಅನುರೂಪವಾಗಿ ದೇವರ ವಾಕ್ಯಗಳನ್ನು ನಿಷ್ಠೆಯಿಂದ ಹುಡುಕುವುದನ್ನು ನಿರ್ಲಕ್ಷಿಸಿದ್ದಾರೆ. ಆದರೆ ದೇವರ ವಾಕ್ಯಗಳ ಅನ್ವೇಷಣೆಯು "ರಕ್ಷಣೆ ಹೊಂದಿಸುವ ಜ್ಞಾನ"ದಿಂದ ಅವರನ್ನು ಬುದ್ದಿವಂತರನ್ನಾಗಿ ಮಾಡಬಹುದಾಗಿದೆ.

ಅಪೇಕ್ಷಣೀಯವಲ್ಲದ ಚಹರೆ, ಅವರು ಎದುರುನೋಡುತ್ತಿದ್ದ ಗೌರವ (ಸೌಂದರ್ಯ)ದ ಕೊರತೆ ಇವುಗಳನ್ನೇ ಪ್ರವಾದಿಯು ಉಲ್ಲೇಖಿಸಿರುವುದು ಸ್ಪಷ್ಟವಾಗಿದೆ ಎಂದು ತೋರಿಬರುತ್ತದೆ. ಚಾರಿತ್ರಿಕ ಘಟನೆಗಳೊಂದಿಗೆ ಸಾಮರಸ್ಯದಿಂದ ಲೋಕದ ಪಾಪವನ್ನು ಹೊತ್ತುಕೊಂಡ ದೇವರ ಕುರಿಮರಿಯಾದ ಆತನ ಪವಿತ್ರತೆ, ನಿಷ್ಕಳಂಕ, ನಿರುಪದ್ರವಿ. ಪಾಪಿಗಳಿಂದ ಪ್ರತ್ಯೇಕಗೊಂಡವನು ಎಂಬ ಪುನರುಚ್ಚರಿಸಲ್ಪಟ್ಟ ಹೇಳಿಕೆಗಳ ತಾರ್ಕಿಕ ಸಾಮರಸ್ಯದ ಮೂಲಕ ಈ ಪ್ರವಾದನೆಯನ್ನು ಅರ್ಥೈಸುವುದಾಗಲೀ, ಅಥವಾ ಭಾಷಾಂತರಿಸುವುದಾಗಲೀ ಸಮಂಜಸವೆನಿಸದು.

## "ಆತನ ಮುಖವು . . . . ಆತನ ರೂಪವು ವಿಕಾರವಾಗಿತ್ತು"

(ಯೆಶಾಯ 52:14–15)

**"His Visage was So Marred"** (Isa. 52:14,15)

ಇಲ್ಲಿಯೂ ಸಹಾ ನಮ್ಮ ಕರ್ತನ ಬಾಹ್ಯ ಚಹರೆಯ ಬಗ್ಗೆ ತಪ್ಪಾಗಿ ಭಾಷಾಂತರ ಮಾಡಲಾಗಿದ್ದು ನಮ್ಮಲ್ಲಿ ಈ ಬಗ್ಗೆ ತಪ್ಪಾದ ಆಲೋಚನೆಗಳನ್ನು ಮೂಡಿಸುವುದಾಗಿದೆ. ಹೀಗಿದ್ದರೂ ವ್ಯಭಿಚಾರ, ಭಯಂಕರ ರೋಗಗಳು, ದುರಂತಗಳಿಂದ ಉಂಟಾದ ಹಾನಿ ಇವುಗಳಿಂದ ತಮ್ಮ ಚಹರೆಯನ್ನು ಕೆಡಿಸಿಕೊಂಡ ಅನೇಕರ ಮುಖಗಳನ್ನು ನೋಡಿದ ನಮ್ಮ ತಾತ್ಸಾರಿ ಓದುಗರಿಗೆ ನಮ್ಮ ಕರ್ತನ ಈ ರೀತಿಯ ಮುಖಭಾವ ಅಥವಾ ಚಹರೆಯನ್ನು, ಅದು ಇನ್ನೂ ಹೆಚ್ಚಾಗಿ ವಿಕಾರಗೊಂಡಿರುವುದನ್ನು ಗ್ರಹಿಸಲು ಅಸಾಧ್ಯವೆನಿಸಬಹುದು. ನಿಶ್ಚಯವಾಗಿಯೂ ಇಂಥಾಃ ಹೇಳಿಕೆಯಲ್ಲಿ ಯಾವುದೋ ತಪ್ಪು ಅಭಿಪ್ರಾಯವಿದೆ. ಅಂತಹ ವ್ಯಕ್ತಿಯನ್ನು ಪಿಲಾತನು ಅವರ ಮುಂದೆ ತಂದು "ಇಗೋ ಈ ಮನುಷ್ಯನು!" ಎಂದು ಹೇಳಿರಲಾರನು. ಅಂಥಾಃ ವ್ಯಕ್ತಿಗೆ ಸಾಧಾರಣ ಜನರು 'ದಾವೀದನ ಕುಮಾರ'ನು ಎಂದು ಜಯಕಾರಮಾಡುತ್ತಿದ್ದಿಲ್ಲ ಮತ್ತು ಒತ್ತಾಯ ಪೂರ್ವಕವಾಗಿ ಆತನನ್ನು ತಮ್ಮ ಅರಸನನ್ನಾಗಿ ಮಾಡಿಕೊಳ್ಳ ಬಯಸುತ್ತಿದ್ದಿಲ್ಲ. ಇದಲ್ಲದೆ **'ಆತನ ಒಂದು ಎಲುಬನ್ನಾದರೂ ಮುರಿಯಕೂಡದು'** (ಯೋಹಾನ 29:36) ಎಂಬ ಶಾಸ್ತ್ರದ ಮಾತಿನ ಮೇಲೆ ನಮಗೆ ಭರವಸೆ ಇಲ್ಲವೇ? ಆದರೆ ಈ ಪ್ರವಾದನೀಯ ಮಾತುಗಳಲ್ಲಿ ಇಷ್ಟೊಂದು ಬದಲಾವಣೆ ಹೇಗೆ? ನಾವು ಇದನ್ನು ಈ ರೀತಿಯಾಗಿ ತರ್ಜುಮೆ ಮಾಡುವುದರಿಂದ ವೇದಗ್ರಂಥದ ಚರಿತ್ರೆ ಮತ್ತು ಆತನ ಪವಿತ್ರತೆ ಮತ್ತು ಶುದ್ಧತೆಗಳ ತಾರ್ಕಿಕ ವ್ಯವಕಲನಗಳಲ್ಲಿ ಎಷ್ಟರಮಟ್ಟಿನ ಸ್ಥಿರತೆಯುಂಟಾಗುತ್ತದೆ ಅಲ್ಲವೇ? :–

"ನಿನ್ನನ್ನು ಆಶ್ಚರ್ಯಗೊಳಿಸುವವುಗಳು ಅನೇಕವಿರುವಂತೆ (ಅದರಂತೆ ಆತನ ಚಹರೆಯನ್ನು

ಮಾನವನು, ಮಾನವ ಮಕ್ಕಳು ಸಹಾ ಕುರೂಪಗೊಳಿಸಿರುವರು) ಆತನು ಅನೇಕರನ್ನು ಆಶ್ಚರ್ಯಗೊಳಿಸುವನು". ಆತನಿಗೆ ಮುಳ್ಳಿನ ಕಿರೀಟವನ್ನು ಇಟ್ಟು, ಬಡಿಗೆಯಿಂದ ಬಡಿದು, ಆತನನ್ನು ಶಿಲುಬೆಗೆ ಹಾಕಿಸಿದವರ, ಆತನನ್ನು ಈಟಿಯಿಂದ ತಿವಿದವರ ನಿಂದನೆಗಳಿಗೆ ಆತನು ತಲೆಬಾಗಿದ ಬಗ್ಗೆ ಆತನ ಕಾಲದ ಜನರು ಆಶ್ಚರ್ಯಪಟ್ಟರು. ಅದರಂತೆ ಇಂದಿನ ಮತ್ತು ಮುಂದಿನ ಎಲ್ಲಾ ಜನಾಂಗದವರು "ಆತನು ತನ್ನ ಬಗ್ಗೆ ಅಂಥಾಃ ವ್ಯತಿರಿಕ್ತತೆಗಳನ್ನು" ತೋರಿದವರಿಗೆ ವ್ಯಕ್ತಪಡಿಸಿದ ಸಹನೆಯ ಬಗ್ಗೆ ಕೇಳಿದವರಾಗಿ ಬೆರಗಾಗುವರು (ಇಬ್ರಿಯ 12:3 ನೋಡಿರಿ) ಮತ್ತು ಮುಂದೆಯೂ ಅಂಥಾಃ ತಾಳ್ಮೆ ಮತ್ತು ಸಾಧುಸ್ವಭಾವದ ಬಗ್ಗೆ ಬೆರಗಾಗಲಿರುವರು.

"ಆತನ ಮುಂದೆ ಅರಸರುಗಳು ತಮ್ಮ ಬಾಯಿ ಮುಚ್ಚಿಕೊಂಡಿರುವರು; ಇತರರ ಬಗ್ಗೆ ದಾಖಲೆಯಾಗ ದಿರುವುದನ್ನು (ಆತನಲ್ಲಿ ಮಾದರಿಯಾಗಿರುವುದನ್ನು) ಅವರು ಕಾಣುವರು: ಅವರು ಇದುವರೆಗೆ ಅರ್ಥಮಾಡಿ ಕೊಳ್ಳಲಾರದವುಗಳನ್ನು ಈಗ ಅರ್ಥಮಾಡಿಕೊಳ್ಳುವರು. ಯಾವುದೇ ಅರಸನು ಸ್ವಯಿಚ್ಚೆಯಿಂದ ತನ್ನ ಪ್ರಜೆಗಳಿಗೆ ಒಳ್ಳೆಯದನ್ನು ಮಾಡುವ ಸಲುವಾಗಿ ಅವರ ಅಂಥಾಃ ಉಪೇಕ್ಷೆಗಳಿಗೆ ತನ್ನನ್ನು ಒಪ್ಪಿಸಿಕೊಟ್ಟದ್ದನ್ನು ಈ ಲೋಕದ ಉತ್ತಮ ಜನರು ಎಂದೂ ಕೇಳಿದ್ದಿಲ್ಲ. ನಿಜವಾಗಿಯೂ "ಆತನ ಪ್ರೀತಿಯು ಸಹೋದರ ಪ್ರೀತಿಗಿಂತಲೂ ಶ್ರೇಷ್ಟವಾದುದು". ಎಲ್ಲರೂ "ಸೂಕ್ತಸಮಯ"ದಲ್ಲಿ ಬೆರಗಾಗುವುದರಲ್ಲಿ ಆಶ್ಚರ್ಯವೇನಿಲ್ಲ.

ನಮ್ಮ ವಿಮೋಚಕನು ನಿಸ್ಸಂದೇಹವಾಗಿ ದುಃಖದ ಮುಖವನ್ನು ಹೊತ್ತಿದ್ದನು. ನಾವು ಕಂಡುಕೊಂಡಂತೆ ಆಳವಾಗಿ ಅನುಕಂಪಿತವಾದ ಆತನ ಹೃದಯವು ನಮ್ಮ ಅಪರಾಧಗಳ ನಿಮಿತ್ತ ಮನಮರುಗಿತ್ತು. ಆ ಗುರುತುಗಳು ಕಲ್ವಾರಿಯಲ್ಲಿ ಆತನು ಸೇವೆಯು ಮುಕ್ತಾಯಗೊಳ್ಳುವವರೆಗೆ ವೃದ್ಧಿಯಾಗುತ್ತಾ ಹೋದುದರಲ್ಲಿ ಯಾವುದೇ ಅನುಮಾನವಿಲ್ಲ. ಶರೀರ ರಚನೆಯು ಎಷ್ಟು ಸೂಕ್ಷ್ಮವಾಗಿದೆಯೋ ಅದಕ್ಕಿಂತ ಅದರ ಸಂವೇದನಾ ಶಕ್ತಿಯೂ ಇನ್ನೂ ಹೆಚ್ಚಾಗಿರುತ್ತದೆ, ಅದು ನೋವಿಗೆ ಹೆಚ್ಚು ಚಿತ್ತವೇಧಕವಾಗಿರುತ್ತದೆ ಎಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳ ಬೇಕಾಗುತ್ತದೆ. ನಾವು ಕೂಡಲೇ ಅರ್ಥ ಮಾಡಿಕೊಳ್ಳಬಹುದಾದದ್ದು ಏನೆಂದರೆ ತೊಂದರೆಗಳು, ಖಾಯಿಲೆ, ನೋವು ಮತ್ತು ಕೊರತೆಗಳು. ಇವುಗಳಿಗೆ ನಾವು ನಮ್ಮ ಸ್ವಂತ ಪತನದಿಂದ ಮಾನವನ ನಿರಂತರ ದುಃಖ-ದುಮ್ಮಾನಕ್ಕೆ ಒಳಗಾಗಿ ನಡೆದಿರುತ್ತೇವೆ. ಹಾಗಿರುವಾಗ ಸಮರ್ಪಕ ವ್ಯಕ್ತಿಗೆ - ಪವಿತ್ರನೂ, ನಿರುಪದ್ರವಿಯೂ, ನಿಷ್ಕಳಂಕನೂ, ಪಾಪಿಗಳಿಂದ ಪ್ರತ್ಯೇಕಗೊಂಡವನೂ ಆದಾತನಿಗೆ ಬಹಳ ಪಟ್ಟು ಹೆಚ್ಚಿನ ಮಹತ್ವದ ಸಂಗತಿಯಾಗಿದೆ.

ಇದೇ ಸಂಗತಿಗಳು ಸ್ವಲ್ಪ ಮಟ್ಟಿಗೆ ನಮ್ಮ ಅನುಭವದಲ್ಲಿಯೂ ವಿಶದಗೊಂಡಿರುವುದನ್ನು ನಾವು ಕಾಣಬಹುದು. ತುಲನಾತ್ಮಕವಾಗಿ ಸೂಕ್ಷ್ಮ ಸಂವೇದನಾ ಶಕ್ತಿಯುಳ್ಳವರು, ಆಡಂಬರತೆಗೆ, ಶಿಷ್ಟಾಚಾರತೆಗೆ, ಸೌಂದರ್ಯಕ್ಕೆ ಮತ್ತು ಹಿತವಾದ ಪರಿಸರಕ್ಕೆ ಒಗ್ಗಿಹೋದವರು ಒಂದು ವೇಳೆ ಮಹಾ ನಗರದ ಕೊಳಚೆ ಪ್ರದೇಶಗಳಿಗೆ ಭೇಟಿ ನೀಡಿದಲ್ಲಿ ಮತ್ತು ಅಲ್ಲಿನ ಹೀನಾಯ ಸ್ಥಿತಿಯನ್ನು, ಅಹಿತ ಪರಿಸ್ಥಿತಿಗತಿಗಳನ್ನು ಕಂಡಲ್ಲಿ, ದುರ್ವಾಸನೆಯನ್ನು ಅನುಭವಿಸಿದಲ್ಲಿ, ಅಸಂಬದ್ಧವಾದ ಸ್ವರಗಳನ್ನು ಆಲಿಸಿದಲ್ಲಿ, ಹೊಲಸು ದೃಶ್ಯಗಳನ್ನು ನೋಡಿದಲ್ಲಿ ಖಂಡಿತವಾಗಿಯೂ ಅವರ ಹೃದಯಗಳಲ್ಲಿ ಕಾಯಿಲೆಗೊಳಗಾಗುವರು. ಇಚ್ಛೆಯಿಲ್ಲದೆ ಅವರ ಮುಖಭಂಗಿಯು ಇಳಿದುಹೋಗುತ್ತದೆ, ಇಂಥಾಃ ದುಃಸ್ಥಿತಿಯ ಜೀವನವು ಎಂಥಿರಬಹುದು?, ಮರಣವು ವರವಲ್ಲವೇ! ಎಂಬ ಆಲೋಚನೆ ಅವರಲ್ಲಿ ಹುಟ್ಟಿಕೊಳ್ಳುತ್ತದೆ. ಬಹುಶಃ ಇದನ್ನು ಇನ್ನೂ ಸ್ವಗತಮಾಡಿಕೊಳ್ಳುವಾಗಲೇ, ಅಲ್ಲಿ ಸಂತೋಷವಾಗಿ ಆಟವಾಡುತ್ತಿರುವ ಮಕ್ಕಳ ಮೇಲೆ ಅವರ ಕಣ್ಣುಬೀಳಬಹುದು, ಅಲ್ಲೇ ಕೆರೆಯ ದಂಡೆಯಲ್ಲಿ ಬಟ್ಟೆಯೊಗೆಯುವ ಮಹಿಳೆಯರ ಮಂಜುಳ ಗಾನ ಅವರ ಕಿವಿಗೆ ಬೀಳಬಹುದು, ಒಬ್ಬಾತನು ಯಾವುದೇ ಚಿಂತೆಯಿಲ್ಲದೆ ವೃತ್ತ ಪತ್ರಿಕೆ ಓದುತ್ತಿರುವುದನ್ನು ಅವರು ಕಾಣಬಹುದು, ಅಥವಾ ಒಬ್ಬ ಬಾಲಕ ಹಳೆಯ ವಾದ್ಯವೊಂದನ್ನು ನುಡಿಸಲು ಪ್ರಯತ್ನಿಸುತ್ತಿರುವುದನ್ನು ಅವರು ಗಮನಿಸಬಹುದು. ಈ ಎಲ್ಲಾ ಸಂಗತಿಗಳೂ ಸೂಚಿಸುವುದೇನೆಂದರೆ, ಅಂಥಾಃ ದೃಶ್ಯಗಳು, ಧ್ವನಿಗಳು, ದುರ್ವಾಸನೆ ಮತ್ತು ಸಾಮಾನ್ಯ ಸ್ಥಿತಿ ಇವುಗಳಿಗೆ ರೂಢಿಯಾದವರು, ಬಾಲ್ಯಪ್ರಾಯದಿಂದ ಸುಸಂಸ್ಕೃತರಾಗುವವರೆಗೆ ಅದಕ್ಕೆ ವಾಡಿಕೆ ಇರುವವರಿಗಿಂತ ಬಹಳ ಕಡಿಮೆಯಾಗಿ ಅವುಗಳಿಂದ ಪ್ರಭಾವಿತರಾಗುತ್ತಾರೆ.

ಈ ಪಾಠವು ನಮಗೆ ಒಂದು ಸಣ್ಣ ಮಟ್ಟದಲ್ಲಿ ಈ ಭೂಲೋಕದ ಪಾಪ ಮತ್ತು ವಿಪತ್ತು ಸ್ಥಿತಿಗತಿಗಳ ಬಗ್ಗೆ ನಮ್ಮ ಕರ್ತನ ದೃಷ್ಟಿಕೋನಕ್ಕೂ ನಮ್ಮ ದೃಷ್ಟಿಕೋನಕ್ಕೂ ಇರುವ ಅಸಮತೆಯನ್ನು ನಿರೂಪಿಸುವುದಾಗಿದೆ. ಸರ್ವ ಸಂಪೂರ್ಣನಾಗಿದ್ದ ಒಬ್ಬಾತನು ಪರಲೋಕದ ವೈಭವದ ಅಂಗಳವನ್ನು ಬಿಟ್ಟು ಬಂದು ತನ್ನನ್ನು ದೀನತೆಯಿಂದ ತಗ್ಗಿಸಿಕೊಂಡು ಮಾನವನ ಸಂಕಷ್ಟಗಳಲ್ಲಿ ಪಾಲುದಾರನಾಗಿ, ಅವರಿಗೆ ಅನುಕಂಪ ತೋರಿಸುವವನೂ ಮತ್ತು ಅವರ ವಿಮೋಚಕನೂ ಆಗಿ 'ನರಳಾಡುವ ಸೃಷ್ಟಿ'ಗಳ ಬಗ್ಗೆ ನಿಶ್ಚಯವಾಗಿಯೂ ಮತ್ತೂ ಹೆಚ್ಚಾಗಿಯೂ ತಿಳಿಯುವಂತಾಯಿತು. ಹಾಗಾದರೆ, ಆತನ ವೈಭವಯುತವಾದ, ಸಮರ್ಪಕವಾದ ಸುಂದರ ಮುಖವನ್ನು ನಮ್ಮ ದುಃಖದ ಭಾರವು ನೆರಳಿನಂತೆ

ಮರೆಮಾಡಿರುವುದಾದರೆ ಅದರಲ್ಲಿ ಯಾವ ವಿಸ್ಮಯವಿದೆ? ಈ ಲೋಕದ ತೊಂದರೆಗಳೊಡನೆ ಸಂಪರ್ಕಗೊಂಡು ಆತನು ಸ್ವಯಿಚ್ಛೆಯಿಂದ ನಮ್ಮ ಬಲಹೀನತೆಗಳಲ್ಲಿ ಮತ್ತು ಕಾಯಿಲೆಗಳಲ್ಲಿ (ನಾವು ಕಂಡುಕೊಂಡಂತೆ ತನ್ನ ಜೀವಾಂತ್ಯದಲ್ಲಿ ಸ್ವಂತ ಪ್ರಾಣದ, ಜೀವನ ಶಕ್ತಿಯ ಬೆಲೆ ತೆತ್ತು) ಪಾಲುದಾರನಾದಾಗ ಮನುಷ್ಯಕುಮಾರನ ಮುಖದಲ್ಲಿ ಆಳವಾದ ಗುರುತಾದರೆ ಅದರಲ್ಲಿ ಯಾವ ವಿಸ್ಮಯವಿದೆ! ಹೀಗಿದ್ದಾಗ್ಯೂ, ನಾವು ಒಂದು ಕ್ಷಣವಾದರೂ ತಂದೆಯೊಂದಿಗಿನ ಆತನ ಅನ್ಯೋನ್ಯತೆಯನ್ನು, ಪವಿತ್ರಾತ್ಮನೊಡನೆ ಆತನ ಸಾಂಗತ್ಯವನ್ನು, ಮತ್ತು ಆತನ ಸ್ವಂತ ಮನಸ್ಸಾಕ್ಷಿಯೊಂದಿಗಿನ ಒಪ್ಪಿಗೆಯ ಬಗ್ಗೆ ಪ್ರಶ್ನೆಮಾಡುವಂತಿಲ್ಲ. ಯಾಕೆಂದರೆ, ಆತನು ಸದಾಕಾಲ ತಂದೆಯ ದೃಷ್ಟಿಗೆ ಹಿತವಾಗಿರುವುದನ್ನೇ ಮಾಡುವವನಾಗಿದ್ದಾನೆ. ಇವುಗಳು ನಮ್ಮ ವಿಮೋಚಕನ ಚಹರೆಗೆ ಶಾಂತಿಯುತ ನೋಟವನ್ನು ನೀಡಿದ್ದಿರಬಹುದು ಮತ್ತು ಇದು ಸಂತೋಷ ಮತ್ತು ದುಃಖದ, ಶಾಂತಿ ಮತ್ತು ತೊಂದರೆಗಳ ಒಟ್ಟುಗೂಡುವಿಕೆಯಾಗಿದ್ದಿರಬಹುದು. ಪರಲೋಕದ ತಂದೆಯ ಬಗ್ಗೆ ಇದ್ದ ಆತನ ಜ್ಞಾನವು ಆತನನ್ನು ತನ್ನ ಶ್ರಮೆಯಲ್ಲಿಯೂ ಸಂತೋಷಿಸುವಂತೆ ಮಾಡಿದ್ದಿರಬಹುದು. ಅವುಗಳು ನಿಕಟದಲ್ಲಿ ಆತನಿಗೆ ಆಶೀರ್ವಾದದಾಯಕವು ಮಾತ್ರವಲ್ಲ, ಲೋಕದ ಕಟ್ಟಕಡೆಯವರೆಗೆ ರಕ್ಷಣೆಯನ್ನುಂಟುಮಾಡುವವುಗಳಾಗಿವೆ. ಆದುದರಿಂದ, ಮಾನವರ ದುಃಖಗಳು ಆತನ ಚಹರೆಯನ್ನು ನೆರಳಿನಂತೆ ಕವಿದಿದ್ದರೆ, ಆತನ ವಿಶ್ವಾಸ ಮತ್ತು ನಿರೀಕ್ಷೆಗಳು ಆತನ ಮುಖದಲ್ಲಿ ಕಂಡುಬರುತ್ತವೆ ಮತ್ತು ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಶಾಂತಿಯು ಆತನ ಹೃದಯವನ್ನು ಕಾಪಾಡಿ, ಆತನ ವಿರುದ್ಧವಾಗಿ ಪಾಪಿಗಳ ಬಲುದೊಡ್ಡ ಅಸಂಗತತೆಗಳ ನಡುವೆಯೂ ಆತನು ಸದಾ ಕಾಲ ಸಂತೋಷವಾಗಿರುವಂತೆ ಮಾಡಿದೆ ಎಂಬುದು ನಮಗೆ ನಿಶ್ಚಯವಾಗಿದೆ.

## ಹತ್ತು ಸಾವಿರ ಜನರಲ್ಲಿ ಧ್ವಜಪ್ರಾಯನು
## The Chiefest Among Ten Thousand

ಪತನಗೊಂಡ ಸ್ವಭಾವದ ಪಾಪಮಯ, ಮತ್ಸರ ಹೃದಯದವರಿಗೆ, ಸೌಂದರ್ಯಕ್ಕೆ, ಒಳ್ಳೆಯತನಕ್ಕೆ, ಪ್ರೀತಿ ಮತ್ತು ಸತ್ಯಕ್ಕೆ ಸಮಾನ ಲಕ್ಷಣವುಳ್ಳ ಪ್ರತಿಯೊಂದೂ ರುಚಿಕರವಲ್ಲದ್ದು, ಅವುಗಳಲ್ಲಿ ಯಾವ ಅಂದಚಂದ ಗಳೂ ಕಾಣದು, ಯಾವುದೂ ಅಪೇಕ್ಷಣೀಯವಲ್ಲ – ಅವುಗಳು ತೆಗಳಿಕೆಯುಳ್ಳವುಗಳು. ನಮ್ಮ ಕರ್ತನು ಇವುಗಳನ್ನು ಬಲಯುತವಾಗಿ ಹೀಗೆ ವ್ಯಕ್ತಪಡಿಸಿದ್ದಾನೆ – **“ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯನ ಕೃತ್ಯಗಳು ಕೆಟ್ಟವುಗಳಾಗಿರುವುದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು. ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿಸುವುದಿಲ್ಲ. ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿ ಬಂದಾವೆಂದು ಬೆಳಕಿಗೆ ಬರುವುದಿಲ್ಲ”** (ಯೋಹಾನ 3:19–20). ನಾವು ಈ ಸತ್ಯ ಸಂಗತಿಯ ಮುಂದುವರೆದ ನಿದರ್ಶನವನ್ನು ಅಂದರೆ ಕೆಟ್ಟದಾದ ಹೃದಯವು ಕೆಲವೊಮ್ಮೆ ವೈಭವಯುತ ಮುಖವನ್ನು ಹೇಸುತ್ತದೆ ಮತ್ತು ಉಪೇಕ್ಷಿಸುತ್ತದೆ ಎಂಬುದನ್ನು ‘ಆತನನ್ನು ಶಿಲುಬೆಗೆ ಹಾಕಿಸು, ಶಿಲುಬೆಗೆ ಹಾಕಿಸು’ ಎಂದು ಕೂಗಿಕೊಂಡು ಆತನನ್ನು ಹೀನೈಸಿದವರಲ್ಲಿ ಮಾತ್ರವಲ್ಲ ಉಳಿದೆಲ್ಲರಿಗೂ ಅನ್ವಯವಾಗುತ್ತದೆ ಎಂದು ನಾವು ನೋಡುತ್ತೇವೆ. ಸತ್ಯಕ್ಕಾಗಿ ಹುತಾತ್ಮರಾದವರ ವಿವಿಧ ದಾಖಲೆಗಳನ್ನು ನೋಡಿರಿ. ತಮ್ಮ ವೈಯುಕ್ತಿಕ ಶ್ರಮೆಗಳು ಅವರ ಚಹರೆಗಳಲ್ಲಿ ಉಂಟುಮಾಡಿರುವ ಕರಗುವ ಅಲ್ಪ ಪ್ರಭಾವವನ್ನು, ಮತ್ತು ಅವರನ್ನು ಶಿಕ್ಷೆಪಡಿಸುವವರಿಗಾಗಿ ಪ್ರಾರ್ಥಿಸಿದ್ದನ್ನು ಗಮನಿಸಿರಿ. ಮೊದಲನೆಯ ರಕ್ತಸಾಕ್ಷಿಯಾದ ಸ್ತೇಫನನ ಮೇಲೆ ತಪ್ಪು ಹೊರಿಸಿ ಆತನನ್ನು ವಿಚಾರಣೆಗೆ ಗುರಿಪಡಿಸಿದಾಗ “ಅವನ ಮುಖವು ದೇವದೂತನ ಮುಖದಂತೆ” ಸುಂದರವಾಗಿ ಪ್ರಕಾಶಿಸುತ್ತಿತ್ತು **“ಆಗ ಹಿರಿಸಭೆಯಲ್ಲಿ ಕೂತಿದ್ದವರು ಅವನನ್ನು ದೃಷ್ಟಿಸಿ ನೋಡಿ ಅವನ ಮುಖವು ದೇವದೂತನ ಮುಖದಂತೆ ಇರುವುದನ್ನು ಕಂಡರು”** (ಅ.ಕೃ. 6:15). ಆದಾಗ್ಯೂ, ಅವರ ಹೃದಯವು ಕಠಿಣವಾಗಿದ್ದುದರಿಂದ ಆತನ ದೇವದೂತನಂಥಃ ಮುಖವನ್ನು (ಬಹುಶಃ ಅದು ಆತನ ಒಡೆಯನಿಗಿಂಥ ಕಡಿಮೆಯಾಗಿ ದೇವದೂತನದಂತಿದ್ದಿರಬಹುದು) ಮೆಚ್ಚಿಕೊಳ್ಳುವ ಬದಲು, ಆತನ ಮಹಾ ಬೋಧಕನ ಮಾತುಗಳಿಗಿಂತಲೂ ಸ್ವಲ್ಪವೇ ಕಡಿಮೆಯಾಗಿರಬಹುದಾದ ಆತನ ಅದ್ಭುತವಾದ ಮಾತುಗಳಿಗೆ ಕಿವಿಗೊಡುವ ಬದಲು **“ಅವರು ಮಹಾ ಶಬ್ಧದಿಂದ ಕೂಗಿ ಕಿವಿಗಳನ್ನು ಮುಚ್ಚಿಕೊಂಡು ಒಟ್ಟಾಗಿ ಅವನ ಮೇಲೆ ಬಿದ್ದು ಅವನನ್ನು ಊರ ಹೊರಕ್ಕೆ ನೂಕಿಕೊಂಡು ಹೋಗಿ ಕೊಲ್ಲುವುದಕ್ಕೆ ಕಲ್ಲೆಸೆದರು”** (ಅ.ಕೃ 7:57–58). ಯೇಸುವನ್ನು ‘ಶಿಲುಬೆಗೆ ಹಾಕಿಸು’ ಎಂದು ಪಿಲಾತನ ಮುಂದೆ ಕೂಗಿ ಕೊಂಡದ್ದು ಕೂಡ ಹೀಗೆಯೇ.

**“ಹೌದು, ಅವನು ಸರ್ವಾಂಗದಲ್ಲಿಯೂ ಸುಂದರನು ಅಥವಾ ಮನೋಹರನು” – ಪರಮಗೀತ 5:16.**

* * * * * *